ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆ –3ನೇ ಅಧಿವೇಶನ)

ಬುಧವಾರ 09ನೇ ಸೆಪ್ಟೆಂಬರ್ 2009ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 11–53 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

(12-00 PM)

1. ಸದಸ್ಯರ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ :

ಅಧ್ಯಕ್ಷರು : ಉಪ ಚುನಾವಣೆಯಲ್ಲಿ ಚುನಾಯಿತರಾಗಿರುವ ನೂತನ ವಿಧಾನಸಭಾ ಸದಸ್ಯರ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ.

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಉಪ ಚುನಾವಣೆಯಲ್ಲಿ ಚುನಾಯಿತರಾಗಿರುವ ನೂತನ ವಿಧಾನಸಭಾ ಸದಸ್ಯರಿಗೆ ಈಗ ಪ್ರಮಾಣ ವಚನ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗುವುದು.

ಚುನಾಯಿತರಾದ ಈ ಕೆಳಕಂಡ ಸದಸ್ಯರು ಭಗವಂತನ ಹೆಸರಿನ ಮೇಲೆ / ಸತ್ಯ ನಿಷ್ಠೆಯ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದರು.

ಸದಸ್ಯರು ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕರಿಸಿದ ಭಾಷೆ
ಶ್ರೀ ಅಶ್ವಥ್ ಎಂ.ಸಿ.	ಚನ್ನಪಟ್ಟಣ	ಕನ್ನಡ
ಶ್ರೀ ನಂಜುಂಡಸ್ವಾಮಿ ಜಿ.ಎನ್.	ಕೊಳ್ಳೆಗಾಲ	ಕನ್ನಡ
ಶ್ರೀ ರಾಜು ಕೆ.	ರಾಮನಗರ	ಕನ್ನಡ
ಶ್ರೀ ವಾಲ್ಮೀಕಿ ನಾಯ್ಕ್	ಚಿತ್ತಾಪುರ	ಕನ್ನಡ

2. ಸಂತಾಪ ಸೂಚನೆ :

ಮಾನ್ಯ ಸಭಾಧ್ಯಕ್ಷರು : ಸ್ವಾತಂತ್ರ್ಯ ಯೋಧ ಮತ್ತು ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ರುದ್ರಪ್ಪರವರು ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರಾಗಿದ್ದ ಶ್ರೀ ವೈ.ಎಸ್.ರಾಜಶೇಖರ ರೆಡ್ಡಿ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸ ಬಯಸುತ್ತೇನೆ.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ರುದ್ರಪ್ಪರವರು 1921ನೇ ಜುಲೈ 1ರಂದು ಜನಿಸಿದ್ದು, ಸ್ವಾತಂತ್ರ್ಯ ಯೋಧರಾಗಿದ್ದರು. ದಿವಂಗತರು 1952ರಲ್ಲಿ ಹೈದ್ರಬಾದ್ ವಿಧಾನಸಭೆಗೆ ಚಿತ್ತಾಪುರ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದು, 1954ರಲ್ಲಿ ಹೈದ್ರಬಾದ್ ವಿಧಾನಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ಹಲವಾರು ಸಂಘ ಸಂಸ್ಥೆಗಳನ್ನು ಸಹಕಾರ ಬ್ಯಾಂಕ್‌ಗಳನ್ನು ಸ್ಥಾಪಿಸಿರುತ್ತಾರೆ. ಶ್ರೀಯುತರು 1962 ಮತ್ತು 1967ರಲ್ಲಿ ಮೈಸೂರು ವಿಧಾನ ಸಭೆಗೆ ಕಾಳಗಿ ಮತ್ತು ಚಿತ್ತಾಪುರ ಕ್ಷೇತ್ರದಿಂದ ಪುನರಾಯ್ಕೆಗೊಂಡಿದ್ದರು.

ಶ್ರೀಯುತರು ದಿನಾಂಕ : 28.7.2009ರಂದು ನಿಧನ ಹೊಂದಿದರು.

ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಡಾ: ವೈ.ಎಸ್.ರಾಜಶೇಖರ ರೆಡ್ಡಿರವರು 1949ರ ಜುಲೈ 8 ರಂದು ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪಿಲಿವೆಂದುಲದಲ್ಲಿ ಜನಿಸಿದ್ದರು. ದಿವಂಗತರು ತಮ್ಮ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪದವಿ ಶಿಕ್ಷಣವನ್ನು ಬಳ್ಳಾರಿಯಲ್ಲಿ ಪಡೆದಿದ್ದರಲ್ಲದೇ, ಗುಲ್ಬರ್ಗಾದ ಎಂ.ಆರ್.ಕಾಲೇಜ್‌ನಲ್ಲಿ ಎಂ.ಬಿ.ಬಿ.ಎಸ್. ಪದವಿಯನ್ನು ಪಡೆದು ಕೊಂಡಿರುತ್ತಾರೆ.

ಶ್ರೀಯುತರು 1978ರಲ್ಲಿ ರಾಜಕೀಯ ಪ್ರವೇಶ ಮಾಡಿ ಕಡಪ ಸಂಸತ್ ಕ್ಷೇತ್ರದಿಂದ ಸತತವಾಗಿ ನಾಲ್ಕು ಬಾರಿ ಸಂಸತ್‌ಗೆ ಆಯ್ಕೆಯಾ ಗಿದ್ದರಲ್ಲದೇ, ಪುಲಿವೆಂದುಲ ಕ್ಷೇತ್ರದಿಂದ ಸತತ ಐದು ಬಾರಿ ಆಂಧ್ರಪ್ರದೇಶ ವಿಧಾನ ಸಭೆಗೆ ಆಯ್ಕೆಯಾಗಿ ಸೋಲಿಲ್ಲದ ಸರದಾರರಾಗಿರುತ್ತಾರೆ. 1999 ರಿಂದ 2004ರ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವ ಹಿಸಿರುತ್ತಾರೆ. ದಿವಂಗತರು 2004 ರಿಂದ 2009ರವರೆಗೆ ರಾಜ್ಯದ ಮುಖ್ಯ ಮಂತ್ರಿಯಾಗಿದ್ದರಲ್ಲದೇ 2009ರ ಮೇ ತಿಂಗಳಿಗಳಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಐದನೇ ಬಾರಿಗೇ ವಿಧಾನಸಭೆಗೆ ಪುನರಾಯ್ಕೆಗೊಂಡು ಸತತವಾಗಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ನೇಮಕಗೊಂಡ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ.

ದಿನಾಂಕ : 2.9.2009ರಂದು ನಡೆದ ಹೆಲಿಕಾಪ್ಟರ್ ದುರಂತದಲ್ಲಿ ನಿಧನ ಹೊಂದಿದ ಡಾ: ವೈ.ಎಸ್.ರಾಜಶೇಖರ ರೆಡ್ಡಿ ಅವರ ಅಕಾಲಿಕ ಸಾವಿನಿಂದ ದೇಶವು ಒಬ್ಬ ಜನಪ್ರಿಯ ರಾಜಕೀಯ ನಾಯಕನನ್ನು ಕಳೆದುಕೊಂಡಂತಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಹಿಂದಿನ ವಿಧಾನಸಭಾ ಅಧಿವೇಶನದ ನಂತರ ನಮ್ಮಿಂದ ದೂರವಾದ ಮುಖಂಡರ ಕುರಿತು ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ ಈ ಮುಖಂಡರ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಶ್ರೀ ಎಸ್. ರುದ್ರಪ್ಪನವರು ಸ್ವಾತಂತ್ರ್ಯ ನಂತರ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಹೈದರಾಬಾದ್ ವಿಧಾನಸಭೆಗೆ ಮತ್ತು ಏಕೀಕರಣದ ನಂತರ ಕರ್ನಾಟಕ ವಿಧಾನಸಭೆಗೆ ಆರಿಸಿ ಬಂದಿದ್ದರು. ಶ್ರೀ ಎಸ್.ರುದ್ರಪ್ಪನವರು ಸಹಕಾರ ಕ್ಷೇತ್ರದಲ್ಲಿ ಮಾಡಿರುವ ಸೇವೆ ಅಮೋಘ ವಾದಂಥದ್ದು. ಗುಲ್ಬರ್ಗಾ ಜಿಲ್ಲೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ ರುದ್ರಪ್ಪನವರು ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮದೇ ಆದಂಥ ಹೆಸರು ಪಡೆದಿದ್ದರು. ಹಲವು ಸಂಘ ಸಂಸ್ಥೆಗಳ ಜೊತೆ ಒಡನಾಟ ಇಟ್ಟುಕೊಂಡಿದ್ದ ರುದ್ರಪ್ಪನವರು ಸಹಕಾರಿ ಕ್ಷೇತ್ರದಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದರು. ಅವರು ಆರಂಭಿಸಿದ ಹಲವಾರು ಸಹಕಾರಿ ಸಂಸ್ಥೆಗಳು ಇಂದಿಗೂ ಜನಸೇವೆಯಲ್ಲಿ ನಿರತವಾಗಿರುವುದಕ್ಕೆ ನಿದರ್ಶನ ವಾಗಿದೆ. ರುದ್ರಪ್ಪನವರು ಎರಡು ಬಾರಿ ಕರ್ನಾಟಕ ವಿಧಾನಸಭಾ ಸದಸ್ಯ ರಾಗಿದ್ದು ಸಭೆಯ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದು ಅವರು ಕಳೆದ ಜುಲೈ 28ರಂದು ನಮ್ಮನ್ನಗಲಿದ್ದಾರೆ.

ಡಾ: ವೈ.ಎಸ್. ರಾಜಶೇಖರ ರೆಡ್ಡಿಯವರು ಹುಟ್ಟಿದ್ದು ನೆರೆಯ ಆಂಧ್ರದಲ್ಲಾದರೂ ಕರ್ನಾಟಕದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಡಾ: ವೈ.ಎಸ್.ರಾಜಶೇಖರರೆಡ್ಡಿಯವರು ಜನನಾಯಕರಾಗಿ ಸೇವೆ ಸಲ್ಲಿಸಿದಂಥ ಮುಂದಾಳುಗಳಲ್ಲಿ ಒಬ್ಬರಾಗಿದ್ದರು. ಕರ್ನಾಟಕ, ಬಳ್ಳಾರಿ, ಗುಲ್ಬರ್ಗಾದಲ್ಲಿ ವಿದ್ಯಾಭ್ಯಾಸ ಮಾಡಿದ್ದ ಅವರು ಜನಸೇವೆಯನ್ನು ವೈದ್ಯರಾಗಿ ಆರಂಭಿಸಿದರು. ವಿಧಾನ ಸಭೆ ಹಾಗೂ ಲೋಕಸಭೆಯ ಸದಸ್ಯರಾಗಿ ಸುದೀರ್ಘ ಕಾಲ ಸಾರ್ವಜನಿಕ ಜೀವನದಲ್ಲಿ ಡಾ: ರಾಜಶೇಖರ ರೆಡ್ಡಿಯವರು ಜನರ ನಾಡಿ ಮಿಡಿತವನ್ನು ಸಂಪೂರ್ಣವಾಗಿ ಬಲ್ಲವರಾಗಿದ್ದರು. ಗ್ರಾಮೀಣ ಪ್ರದೇಶಾಭಿವೃದ್ಧಿಗೆ ಹೆಚ್ಚಿನ ಒತ್ತಾಸೆ ನೀಡುವ ಮೂಲಕ ಹಳ್ಳಿಗರ ಮನಗೆದ್ದಿದ್ದ ಅವರು ಅಭಿವೃದ್ಧಿಯ ಪ್ರಯೋಗಗಳನ್ನು ಆಂಧ್ರದಲ್ಲಿ ಪ್ರಾರಂಭಿಸಿ ಎಲ್ಲರಿಗೂ ಮಾದರಿಯಾದರು. ಜನನಾಯಕರಾದರು. ಅದರ ಪರಿಣಾಮ ಡಾ: ವೈ.ಎಸ್.ರಾಜಶೇಖರರೆಡ್ಡಿಯವರು ನಾಲ್ಕು ಸಲ ಲೋಕಸಭಾ ಸದಸ್ಯರಾಗಿ, ಐದು ಬಾರಿ ಸತತವಾಗಿ ವಿಧಾನ ಸಭೆಯ ಸದಸ್ಯರಾಗಿದ್ದುದ್ದು

ನಮಗೆಲ್ಲಾ ಗೊತ್ತಿದೆ. ಎರಡು ಬಾರಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರ ಅಕಾಲಿಕ ಕಣ್ಮರೆಯಿಂದ ಜನಸಮುದಾಯದ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ. ಆಂಧ್ರದಲ್ಲಿ ಅಭಿವೃದ್ಧಿ ವಿಚಾರದಲ್ಲಿ ರಾಜಶೇಖರ ರೆಡ್ಡಿಯವರ ಕೊಡುಗೆ ಮರೆಯಲಾಗದಂಥದ್ದು. ಅವರ ಅಕಾಲಿಕ ನಿಧನ ನಮಗೆ ಆಘಾತ ತಂದಿದೆ. ದುರಂತ ಸಂಭವಿಸಿದ ಸಂದರ್ಭದಲ್ಲಿ ನಾನು ಚೈನಾ ಪ್ರವಾಸದಲ್ಲಿದ್ದೆ. ಆಗ ಮಾಧ್ಯಮಗಳ ಮೂಲಕ ನಾನು ಶ್ರದ್ಧಾಂಜಲಿ ಸಲ್ಲಿಸಿದ್ದೆ. ಈ ಅಧಿವೇಶನ ಮುಗಿದ ಮೇಲೆ ಅವರ ಕುಟುಂಬದವರನ್ನು ಭೇಟಿ ಮಾಡಿ ಅವರಿಗೆ ಸಾಂತ್ವನ ಹೇಳಬೇಕೆಂದು ನಿರ್ಧಾರ ಮಾಡಿದ್ದೇನೆ. ಈ ಸದನದ ಮೂಲಕ ಅವರಿಗೆ ಗೌರವ ಸಮರ್ಪಿಸುತ್ತೇನೆ ಮತ್ತು ಈ ಆಘಾತವನ್ನು ತಡೆದುಕೊಳ್ಳುವ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ.

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಟಿ.ಎ. ರೆಡ್ಡಿಯವರು ಮಂಗಳವಾರ ನಿಧನರಾಗಿದ್ದಾರೆ. ಅವರು ಮೂಲತಃ ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನವರಾಗಿದ್ದು ಚಿತ್ರದುರ್ಗ ತಾಲ್ಲೂಕಿನ ತೋಪರ ಮಾಳಿಗೆ ಗ್ರಾಮದಲ್ಲಿ ನೆಲೆ ನಿಂತಿದ್ದರು. ಸಹಕಾರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದ ರೆಡ್ಡಿಯವರು 1976–82 ರ ನಡುವೆ ಒಂದು ಅವಧಿಗೆ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಯಾಗಿದ್ದರು. ಸಾರ್ವಜನಿಕ ಬದುಕಿನಲ್ಲಿ ತಮ್ಮದೇ ಆದ ಕಾಣಿಕೆ ನೀಡಿದ್ದ ಈ ಮೂವರು ಮಹನೀಯರ ನಿಧನಕ್ಕೆ ಸದನದಲ್ಲಿ ಮಂಡಿಸಲಾಗಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ನನ್ನ ಧ್ವನಿಗೂಡಿಸಿ ಇವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಕಳೆದ ವಿಧಾನಸಭಾ ಅಧಿವೇಶನ ಮುಗಿದ ಮೇಲೆ ನಮ್ಮ ರಾಜ್ಯದವರೇ ಆದಂಥ ಈ ಮನೆಯ ಸದಸ್ಯರಾಗಿದ್ದ ಒಬ್ಬ ಸ್ವಾತಂತ್ರ್ಯ ಯೋಧ, ಹಿರಿಯ ರಾಜಕಾರಣಿಯಾಗಿದ್ದ ಶ್ರೀ ಎಸ್.ರುದ್ರಪ್ಪನವರು ನಮ್ಮನ್ನಗಲಿದ್ದಾರೆ. ಅವರು ಸ್ವಾತಂತ್ರ್ಯ ಬಂದಮೇಲೆ ಮೊದಲನೇ ವಿಧಾನಸಭೆಯಲ್ಲಿಯೇ ಚುನಾವಣೆಯಲ್ಲಿ ನಿಂತು ಗುಲ್ಬರ್ಗಾ ವಿಧಾನಸಭೆಯ ಸದಸ್ಯರಾಗಿದ್ದರು. ಕರ್ನಾಟಕ ಏಕೀಕರಣವಾದ ಮೇಲೆ ಎರಡು ಬಾರಿ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. 10 ವರ್ಷಗಳ ಕಾಲ ಶಾಸಕರಾಗಿ ಕರ್ನಾಟಕ ವಿಧಾನಸಭೆಯಲ್ಲಿ

ಕೂಡ ಕೆಲಸ ಮಾಡಿದ್ದಾರೆ. ಅವರು ಸ್ವಾತಂತ್ರ್ಯ ಯೋಧರು ಮತ್ತು ಕಾಂಗ್ರೆಸ್ಸಿನ ಕಟ್ಟಾಳು ಆಗಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸಿ ಕಾಂಗ್ರೆಸ್ ಪಕ್ಷಕ್ಕೆ ಮತ್ತು ಶಾಸಕರಾಗಿ ಈ ರಾಜ್ಯಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದರು. ಅನೇಕ ಸಹಕಾರ ಸಂಘಗಳನ್ನು, ಸಹಕಾರ ಬ್ಯಾಂಕುಗಳನ್ನು ಕಟ್ಟಿ ಬೆಳೆಸಿ ರೈತವರ್ಗದವರಿಗೆ ಬಹಳಷ್ಟು ಸಹಾಯ ಮಾಡತಕ್ಕಂಥ ಕೆಲಸವನ್ನೂ ಮಾಡಿದ್ದಾರೆ. ಅವರೊಬ್ಬ ಸಹಕಾರಿ ಧುರೀಣರೂ ಕೂಡ ಆಗಿದ್ದರು. ಅವರೊಬ್ಬ ಸ್ವಾತಂತ್ರ್ಯ ಯೋಧ, ಸಹಕಾರಿ ಧುರೀಣರು, ಜೊತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯದ ನಂತರ ಮೊದಲ ಚುನಾವಣೆಯಲ್ಲಿ ನಿಂತು ಗೆದ್ದಂತಹ ಹಿರಿಯ ನಾಯಕರು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಒಬ್ಬ ಹಿರಿಯ ಸ್ವಾತಂತ್ರ್ಯ ಯೋಧನನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ ಎನ್ನುವ ನೋವು ನಮ್ಮೆಲ್ಲರಿಗೂ ಕೂಡ ಆಗಿದೆ. ಅವರ ಆದರ್ಶಗಳು, ಅವರ ಜೀವನದಲ್ಲಿ ಕಾಪಾಡಿದಂಥ ಮೌಲ್ಯಗಳು, ಅವೆಲ್ಲವೂ ಇವತ್ತಿನ ಯುವ ಪೀಳಿಗೆಗೆ ಆದರ್ಶಗಳಾಗುತ್ತವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಆ ಹಿರಿಯ ಚೇತನದ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಇವರ ಸಾವಿನಿಂದಾದ ದುಃಖವನ್ನು ಭರಿಸತಕ್ಕಂಥ ಶಕ್ತಿ ಆ ದೇವರು ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರ ಬಗ್ಗೆಯೂ ತಾವು ಸಂತಾಪ ಸೂಚನೆ ತಂದಿದ್ದೀರಿ. ನಾನು ಅದನ್ನು ಅನುಮೋದಿಸುತ್ತಾ, ವೈ.ಎಸ್.ರಾಜಶೇಖರರೆಡ್ಡಿಯವರು ಬಹಳ ದೀರ್ಘ ಕಾಲ ಆಂಧ್ರದ ರಾಜಕಾರಣದಲ್ಲಿದ್ದಂಥವರು. ನಾಲ್ಕು ಬಾರಿ ಲೋಕಸಭೆಗೆ ಆಯ್ಕೆಯಾಗಿ ಸಂಸತ್ ಸದಸ್ಯರಾಗಿ, ಐದು ಬಾರಿ ವಿಧಾನ ಸಭೆಗೆ ಆಯ್ಕೆಯಾಗಿ ಆಂಧ್ರದ ರಾಜಕಾರಣದಲ್ಲಿ ಅವರದೇ ಆದಂತಹ ಛಾಪು ಒತ್ತಿ ಹೋಗಿದ್ದಾರೆ. ಕರ್ನಾಟಕಕ್ಕೂ ಅವರಿಗೂ ಬಹಳ ನಿಕಟವಾದ ಸಂಬಂಧ. ಅವರು ಆಂಧ್ರದ ಕಡಪ ಜಿಲ್ಲೆಯಲ್ಲಿ ಜನಿಸಿದ್ದರೂ ಅವರ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಶಿಕ್ಷಣ ಕರ್ನಾಟಕದಲ್ಲಿ ಆಗಿರುವಂಥದ್ದು. ಅವರ ಪ್ರಾಥಮಿಕ ಶಿಕ್ಷಣ ಬಳ್ಳಾರಿಯಲ್ಲಿ, ಅವರ ವೈದ್ಯಕೀಯ ಶಿಕ್ಷಣ ಗುಲ್ಬರ್ಗಾದಲ್ಲಿ, ಹೀಗಾಗಿ ಅವರು ಹೆಚ್ಚಾಗಿ ವಿದ್ಯಾರ್ಥಿ ಜೀವನವನ್ನು ಕರ್ನಾಟಕದಲ್ಲಿ ಕಳೆದಿದ್ದಾರೆ. ಹೀಗಾಗಿ ಅವರಿಗೂ ಕರ್ನಾಟಕಕ್ಕೂ ಒಂದು ನಿಕಟವಾದ ಸಂಬಂಧ, ಭಾವನಾತ್ಮಕ ಸಂಬಂಧ ನಮ್ಮೆಲ್ಲರಿಗೂ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ

ಬಯಸುತ್ತಿದ್ದೇನೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಬಹುಶಃ ಆಂಧ್ರದಲ್ಲಿ ವಿರೋಧ ಪಕ್ಷದ ನಾಯಕನಾಗಿ 1600 ಕಿ.ಮಿ. ಪಾದಯಾತ್ರೆ ಮಾಡಿದ್ದರು. 1600 ಕಿ.ಮೀ. ಪಾದಯಾತ್ರೆ ಮಾಡಿ ಇಡೀ ಆಂಧ್ರದ ಹಳ್ಳಿಗಾಡಿನ ಜನರ ಸಂಪರ್ಕವನ್ನು ಮಾಡುವ ಪ್ರಯತ್ನ ಮಾಡಿದ್ದರು. ಹೀಗಾಗಿ ಅವರು 2004 ರಲ್ಲಿ ಮುಖ್ಯಮಂತ್ರಿಯಾದ ಮೇಲೆ ಅನೇಕ ಗ್ರಾಮೀಣಾಭಿವೃದ್ಧಿ ಕೆಲಸಗಳನ್ನು ಮಾಡಿದರು. 2 ರೂಪಾಯಿಗೆ ಅಕ್ಕಿ ಕೊಡುವುದು, ಪಂಪ್‌ಸೆಟ್ಟುಗಳಿಗೆ ಪುಕ್ಕಟೆ ವಿದ್ಯುತ್ ಕೊಡುವುದು, ನೀರಾವರಿಗೆ ಪ್ರತಿ ವರ್ಷ, ಅವರು ಮುಖ್ಯಮಂತ್ರಿಯಾಗಿದ್ದಾಗ ಐದು ವರ್ಷ ಗಳಲ್ಲಿ ಸುಮಾರು 50 ಸಾವಿರ ಕೋಟಿಗಿಂತಲೂ ಹೆಚ್ಚಿಗೆ ನೀರಾವರಿಗಾಗಿ ಖರ್ಚು ಮಾಡಿದ್ದರು. ನೀರಾವರಿ, ಕೃಷಿ, ಬಡವರು, ಹಳ್ಳಿಗಾಡಿನ ಜನರ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದಂಥ ಒಬ್ಬ ಮುಖ್ಯಮಂತ್ರಿ.

ಶ್ರೀ ಡಿ.ಕೆ.ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮೇಲಗಡೆ ಗ್ಯಾಲರಿಯಲ್ಲಿ ಮಾರ್ಕೆಟ್ ರೀತಿ ಗಲಾಟೆಯಾಗುತ್ತಿದೆ ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಹೇಳಿ. ಸ್ವಲ್ಪ ವಾಚ್ ಮಾಡಿಸಬೇಕು, ಇಲ್ಲಾಂದ್ರೆ ಸ್ಟಾಪ್ ಮಾಡಿಸಿ ಬಿಡಿ.

ಅಧ್ಯಕ್ಷರು : ನಾನು ಈಗಾಗಲೇ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ : ಬರಲಿ, ಬೇಡ ಎನ್ನುವುದು ಬೇಡ. ಬಂದು ಕುಳಿತುಕೊಂಡು ನೋಡಿ ಮಾತನಾಡದೇ ಹೋಗುವುದಕ್ಕೆ ಹೇಳಿ. ಹೀಗಾಗಿಯೇ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗುವುದಕ್ಕೆ ಸಾಧ್ಯವಾಯಿತು. ಕರ್ನಾಟಕದಲ್ಲಿ ಅವರ ಬಗ್ಗೆ ಬಹಳ ಜನರಿಗೆ ಸಂಬಂಧ ಗಳಿವೆ, ಸ್ನೇಹಗಳಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೊರಗಡೆ ಸ್ವಲ್ಪ ಗಲಾಟೆ ಯಾಗುತ್ತಿದೆ, ಒಳಗಡೆ ಕುಳಿತಿರುವವರನ್ನು ಹೊರಗಡೆ ಕಳುಹಿಸುತ್ತಿದ್ದಾರೆ.

ಅಧ್ಯಕ್ಷರು : ಹೊಸದಾಗಿ ಆಯ್ಕೆಯಾಗಿರುವ ಸದಸ್ಯರು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭ ಇತ್ತು ಹೀಗಾಗಿ ಜನರು ಬಂದಿದ್ದಾರೆ.

ಶ್ರೀ ಸಿದ್ದರಾಮಯ್ಯ : ಜನರು ಬರಲಿ ಗಲಾಟೆ ಮಾಡದೇ ಕುಳಿತು ಕೊಂಡು ನೋಡಲಿ.

ಅಧ್ಯಕ್ಷರು : ಕಾರ್ಯದರ್ಶಿಗಳೇ, ಅಲ್ಲಿ ಹೊರಗಡೆ ಗಲಾಟೆ ಯಾಗುತ್ತಿದೆ, ಕೂಡಲೇ ಸೂಚನೆ ಕೊಟ್ಟು ತಕ್ಷಣ ಆಕ್ಷನ್ ತೆಗೆದುಕೊಳ್ಳಲಿಕ್ಕೆ ಹೇಳಿ. ಅವರು ಕಂಟ್ರೋಲ್ ಮಾಡುತ್ತಾರೆ ನೀವು ಮುಂದುವರಿಸಿ.

ಶ್ರೀ ಸಿದ್ದರಾಮಯ್ಯ : ವೈ.ಎಸ್.ರಾಜಶೇಖರ ರೆಡ್ಡಿಯವರು ಆಂಧ್ರ ಕಂಡಂಥ ಒಬ್ಬ ಅಪರೂಪದ ರಾಜಕಾರಣಿಯಾಗಿದ್ದರು ಎನ್ನುವುದನ್ನು ನಾವಿಂದು ನೆನಪಿಸಿಕೊಳ್ಳಬೇಕಾಗುತ್ತದೆ. ಜನಪ್ರಿಯ ಮುಖ್ಯಮಂತ್ರಿಯಾಗಿದ್ದರು, ಸರಳ ವ್ಯಕ್ತಿತ್ವ ಇಟ್ಟುಕೊಂಡಿದ್ದರು. 2004–05ರಲ್ಲಿ ಮಾನ್ಯ ಧರ್ಮಸಿಂಗ್ ರವರು ಮುಖ್ಯಮಂತ್ರಿಯಾಗಿರುವಾಗ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಮಾವೇಶವನ್ನು ಕರ್ನಾಟಕದಲ್ಲಿ ಮಾಡಿದ್ದರು. ಆ ಸಂದರ್ಭದಲ್ಲಿ ಆಂಧ್ರದ ಮುಖ್ಯಮಂತ್ರಿಗಳು ಇಲ್ಲಿಗೆ ಬಂದಿದ್ದರು. ಆ ಸಭೆಯಲ್ಲಿ ಭಾಗವಹಿಸಿ, ಗ್ರಾಮೀಣಾಭಿವೃದ್ಧಿಯ ಬಗ್ಗೆ ಅವರ ಹಳ್ಳಿಗಾಡಿನ ಜನರ ಬಡವರ ಬಗ್ಗೆ ತೆಗೆದುಕೊಂಡಿರುವ ಕಾರ್ಯಕ್ರಮಗಳು, ಮತ್ತು ನೆರೆ ರಾಜ್ಯಗಳು ಯಾವ ರೀತಿಯ ಸಂಬಂಧಗಳನ್ನು ಇಟ್ಟುಕೊಳ್ಳಬೇಕು ಎನ್ನುವುದರ ಬಗ್ಗೆ ಎಲ್ಲರೂ ಮೆಚ್ಚುವ ರೀತಿಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹೀಗಾಗಿ ಆ ಸಂದರ್ಭದಲ್ಲಿ ಮಾನ್ಯ ರಾಜಶೇಖರ ರೆಡ್ಡಿಯನ್ನು ಹತ್ತಿರದಿಂದ ಪರಿಚಯ ಮಾಡಿಕೊಳ್ಳತಕ್ಕಂಥ ಅವರ ಜೊತೆಯಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡತಕ್ಕಂಥ ಅವಕಾಶ ಸಿಕ್ಕಿತ್ತು. ಅವರು ಬಹಳ ಸ್ನೇಹ ಜೀವಿಯಾಗಿದ್ದರು. ಹೀಗಾಗಿ ಅವರು ಕೇವಲ ಆಂಧ್ರಕ್ಕೆ ಸೀಮಿತವಾದ ರಾಜಕಾರಣಿಯಾಗಿರಲಿಲ್ಲ. ರಾಷ್ಟ್ರ ಮಟ್ಟದ ನಾಯಕರಾಗಿ ಬೆಳೆದಿದ್ದರು. ಅವರ ನಿಧನದಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತು ರಾಷ್ಟ್ರಕ್ಕೆ ಅಪಾರವಾದ ನಷ್ಟವಾಗಿದೆ. ಆಂಧ್ರದಲ್ಲಿ ಕೂಡ ದೊಡ್ಡ ವ್ಯಾಕ್ಯೂಮ್ ಕ್ರಿಯೇಟ್ ಆದ ರೀತಿಯಲ್ಲಿ ಆಗಿದೆ. ಅಂಥ ಒಬ್ಬ ನಾಯಕನನ್ನು ನಾವು ಮತ್ತು ರಾಷ್ಟ್ರ ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಅವರ ಆಕಾಲಿಕ ಮರಣ ಬಹುಶಃ ಹೆಲಿಕ್ಯಾಪ್ಟರ್ ದುರಂತಕ್ಕೆ ತುತ್ತಾಗಿ 24 ಗಂಟೆಗಳ ಕಾಲ ಇಡೀ ಆಂಧ್ರಪ್ರದೇಶ ಅಷ್ಟೆ ಅಲ್ಲ ಭಾರತದ ಅನೇಕ ಭಾಗಗಳ ಜನರು ಆತಂಕದಲ್ಲಿದ್ದರು. ಅವರು ಎಷ್ಟು ಜನಪ್ರಿಯರಾಗಿದ್ದರು ಎಂದರೆ, ಜನರ ಮೇಲೆ ಅವರು ಎಷ್ಟರಮಟ್ಟಿಗೆ ಪ್ರಭಾವ ಬೀರಿದ್ದರು ಎಂದರೆ, ಸುಮಾರು 431 ಜನ ಅವರ ಸಾವಿನಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಹುಶಃ ಭಾರತದಲ್ಲಿ ಯಾವ ನಾಯಕರು ಇಂಥ ದುರಂತಕ್ಕೆ ಒಳಗಾದಾಗ, ಅಕಾಲಿಕ ಮರಣಕ್ಕೀಡಾದಾಗ, ಸುಮಾರು 400 ಕ್ಕೂ ಹೆಚ್ಚು ಅಭಿಮಾನಿಗಳು ಆತ್ಮಹತ್ಯೆ ಮಾಡಿಕೊಂಡಂಥ ನಿದರ್ಶನ ಬಹುಶಃ ಭಾರತದ ರಾಜಕಾರಣದ ಇತಿಹಾಸದಲ್ಲಿ ಇಲ್ಲವೆಂದು ನಾನು ಅಂದು ಕೊಂಡಿದ್ದೇನೆ. ಅವರು ಅಷ್ಟೊಂದು ಜನಪ್ರಿಯ ವ್ಯಕ್ತಿಯಾಗಿದ್ದರು. ಜನರ

ಪ್ರೀತಿ ವಿಶ್ವಾಸಗಳಿಸಿಕೊಂಡಿದ್ದರು. ಅಂಥ ಒಬ್ಬ ನಾಯಕ ಇವತ್ತು ನಮ್ಮ ಕಣ್ಮುಂದೆ ಇಲ್ಲ. ಬಹುಶಃ ಅಂಥ ಅಕಾಲಿಕ ಮರಣ, ಹೆಲಿಕ್ಯಾಪ್ಟರ್ ದುರಂತ, ದುರಂತದಿಂದ ಆಗತಕ್ಕಂಥ ಸಾವು ಯಾರಿಗೂ ಕೂಡ ಬಾರದೇ ಇರಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಅವರು ಇನ್ನು ಹತ್ತಾರು ವರ್ಷಗಳ ಕಾಲ ಈ ದೇಶದ ಸೇವೆ ಮಾಡುವ ಅವಕಾಶವಿದ್ದಂಥ ಒಬ್ಬ ನಾಯಕ. ಹೀಗಾಗಿ ಇಂಥ ಸಾವು ಯಾರಿಗೂ ಬಾರದೇ ಇರಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಅವರ ಕುಟುಂಬದವರಿಗೆ ಮತ್ತು ಎಲ್ಲಾ ವರ್ಗದ ಜನರಿಗೆ ಅವರ ಸಾವಿನ ದುಃಖ ಭರಿಸುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸಿ, ನಾನು ಕೂಡ ನಿಮ್ಮ ಜೊತೆಯಲ್ಲಿ ಅವರಿಗೆ ಸಂತಾಪ ವ್ಯಕ್ತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಶ್ರೀಯುತ ಎಸ್.ರುದ್ರಪ್ಪನವರು 1921 ರಲ್ಲಿ ಜನಿಸಿ, ಸ್ವಾತಂತ್ರ್ಯ ಯೋಧರಾಗಿ ನಿಧನರಾಗಿರುವುದು ಒಂದು ದುಃಖವನ್ನು ತರುವಂಥದ್ದು. ಇವರು 1952ರಲ್ಲಿ ಹೈದ್ರಾಬಾದ್ ವಿಧಾನಸಭೆಗೆ ಚಿತ್ತಾಪುರ ಕ್ಷೇತ್ರದಿಂದ ಆಯ್ಕೆಯಾಗಿ, 1954ರಲ್ಲಿ ಹೈದ್ರಾಬಾದ್ ವಿಧಾನಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ, ಹಲವಾರು ಸಂಘ ಸಂಸ್ಥೆಗಳ ಸ್ಥಾಪನೆಗೆ ಕಾರಣ ಕರ್ತರಾಗಿ 1962 ಮತ್ತು 1967 ರಲ್ಲಿ ಮೈಸೂರು ವಿಧಾನಸಭೆಗೆ ಕಾಳಗಿ ಮತ್ತು ಚಿತ್ತಾಪುರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀಯುತರು ದಿನಾಂಕ: 28.7.2009ರಂದು ನಿಧನರಾಗಿರುವುದು ನಮ್ಮ ರಾಜ್ಯದ ಮತ್ತು ಉತ್ತರ ಕರ್ನಾಟಕ ಭಾಗದ ಜನತೆಗೆ ನೋವುಂಟಾಗಿದೆ. ಅವರ ಆತ್ಮಕ್ಕೆ ಮತ್ತು ಅವರ ಕುಟುಂಬ ವರ್ಗಕ್ಕೆ ಶಾಂತಿ ದೊರಕಲಿ ಎಂದು ಆ ಭಗವಂತನಲ್ಲಿ ನಾನು ಕೇಳುತ್ತೇನೆ. ಅದರ ಜೊತೆಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಡಾ:ವೈ.ಎಸ್. ರಾಜಶೇಖರ ರೆಡ್ಡಿಯವರು 1949ರ ಜುಲೈ 8 ರಂದು ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪುಲಿವೆಂದುಲ ಗ್ರಾಮದಲ್ಲಿ ಜನಿಸಿ ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಹಾಗೂ ಪದವಿ ಶಿಕ್ಷಣವನ್ನು ಬಳ್ಳಾರಿಯಲ್ಲಿ ಪಡೆದು ಗುಲ್ಬರ್ಗಾದಲ್ಲಿ ಎಂ.ಬಿ.ಬಿ.ಎಸ್. ಪದವಿಯನ್ನು ಪಡೆದುಕೊಂಡಿರುತ್ತಾರೆ. 1978 ರಿಂದ ನಾಲ್ಕು ಬಾರಿ ಸಂಸತ್‌ನ್ನು ಪ್ರವೇಶ ಮಾಡಿ ಐದು ಬಾರಿ ವಿಧಾನಸಭೆಯ ಸದಸ್ಯರಾಗಿ ವಿರೋಧ ಪಕ್ಷದ ನಾಯಕರಾಗಿ ಎರಡು ಬಾರಿ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದು ಅದರಲ್ಲಿಯೂ ಗ್ರಾಮೀಣ ಪ್ರದೇಶದ ಬಡವರ ಬಗ್ಗೆ ಕಾಳಜಿ ಇರುವಂಥ ಒಬ್ಬ ನಾಯಕರು ಎಂದು ಹೇಳಬೇಕಾಗುತ್ತದೆ. ಅವರು ಹೆಲಿಕಾಪ್ಟರ್ ದುರಂತದಲ್ಲಿ ನಿಧನರಾಗಿರುವ ಸುದ್ದಿ ಕೇಳಿ

ಆಂಧ್ರಪ್ರದೇಶದಲ್ಲಿ 300 ಕ್ಕೂ ಹೆಚ್ಚು ಜನ ನಿಧನರಾಗಿರುತ್ತಾರೆ. ಅದರಲ್ಲಿಯೂ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರು ನಮ್ಮ ಪಕ್ಕದ ರಾಜ್ಯದವರು. ಅವರ ಕುಟುಂಬಕ್ಕೆ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಹಿರಿಯರಾದಂಥ ಸನ್ಮಾನ್ಯ ಎಸ್.ರುದ್ರಪ್ಪನವರು ಒಂದು ಕಡೆ ಆಂಧ್ರಪ್ರದೇಶದ ಸರ್ಕಾರದಲ್ಲಿಯೂ ಸಹ ಶಾಸಕರಾಗಿ ಈ ನಮ್ಮ ಕರ್ನಾಟಕದ ರಾಜ್ಯದ ಸರ್ಕಾರದಲ್ಲಿಯೂ ಶಾಸಕರಾಗಿ ಅವರು ಅಪಾರವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಅಗಲಿಕೆಯಿಂದ ಅವರ ಅನುಭವದ ನಷ್ಟ ಇವತ್ತು ನಮ್ಮ ರಾಜ್ಯಕ್ಕೆ ಮತ್ತು ಅವರ ಕುಟುಂಬಕ್ಕೆ ಆಗಿದೆ. ಅವರ ಕುಟುಂಬಕ್ಕೆ ಮೊದಲನೆಯದಾಗಿ ಆ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ಆ ಭಗವಂತ ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದಂಥ ಸನ್ಮಾನ್ಯ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರ ಅಕಾಲಿಕ ಮರಣದಿಂದ ಬಹುಶಃ ರಾಷ್ಟ್ರದಲ್ಲಿ ದಿಗ್ಭ್ರಮೆ ಆಗಿರತಕ್ಕಂಥದ್ದು ಅಷ್ಟೆ ಅಲ್ಲ ಬಹಳ ನೋವಿನ ಸಂಗತಿಯನ್ನು ಈ ರಾಷ್ಟ್ರದ ಸಾಮಾನ್ಯ ಜನರಲ್ಲಿ ಕಂಡಿರುವಂಥದ್ದನ್ನು ಕಾಣುತ್ತಿದ್ದೇವೆ. ಕಾರಣ ಅವರು ಆಂಧ್ರಪ್ರದೇಶದಲ್ಲಿ ಒಂದು ಕಡೆ ವಿರೋಧ ಪಕ್ಷದ ನಾಯಕರಾಗಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ಮುಟ್ಟಿಸುವಂಥ ಕೆಲಸದ ಜೊತೆಯಲ್ಲಿ ಸುಮಾರು 1600 ಕಿ.ಮೀ. ಪಾದಯಾತ್ರೆಯನ್ನು ಮಾಡುವುದರ ಮೂಲಕ ಜನ ಸಾಮಾನ್ಯರ ನಾಡಿಮಿಡಿತವನ್ನು ಅರ್ಥಮಾಡಿಕೊಂಡು ಮತ್ತೆ ಅವರು ಅಧಿಕಾರಕ್ಕೆ ಬಂದಿರುವಂಥ ಸಂದರ್ಭದಲ್ಲಿ ಅದಕ್ಕೆ ಅನುಗುಣವಾಗಿ, ಜನಾಭಿಪ್ರಾಯಕ್ಕೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಇವತ್ತು ಮತ್ತೆ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯ ಸ್ಥಾನ ಪಡೆಯುವುದಕ್ಕೆ ಅವಕಾಶವನ್ನು ಪಡೆದುಕೊಂಡಿರುವಂಥ ಒಬ್ಬ ಧೀಮಂತ ವ್ಯಕ್ತಿ. ಇವತ್ತು ಅವರು ತಮ್ಮ ಸರ್ಕಾರದಲ್ಲಿ ಮಾಡಿರತಕ್ಕಂಥ ಕ್ರಾಂತಿಕಾರಕ ಕಾರ್ಯಕ್ರಮಗಳು, ಜಲಯಜ್ಞ ಎನ್ನುವ ಒಂದು ಕಾರ್ಯಕ್ರಮವನ್ನು ಆಂಧ್ರಪ್ರದೇಶದಲ್ಲಿ ತಂದಿದ್ದಾರೆ. ತಮ್ಮ ಮೂಲಕ ನಾನು ಸನ್ಮಾನ್ಯ ಸಭಾನಾಯಕರಲ್ಲಿ ವಿನಂತಿಯನ್ನು ಮಾಡುತ್ತೇನೆ. ಜಲಯಜ್ಞ ಕಾರ್ಯಕ್ರಮವನ್ನು ಯಾವ ರೀತಿಯಲ್ಲಿ ತಂದಿದ್ದಾರೆ. 1,15,000

ಕೋಟಿ ರೂ.ಗಳನ್ನು ಜಲಯಜ್ಞ ಕಾರ್ಯಕ್ರಮಕ್ಕೆ ಕೊಟ್ಟಿದ್ದಾರೆ. ಇಡೀ ಆಂಧ್ರಪ್ರದೇಶದಲ್ಲಿರತಕ್ಕಂಥ ಎಲ್ಲಾ ರಾಯಲ್ ಸೀಮಾ ಪ್ರದೇಶಕ್ಕೆ ನೀರನ್ನು ಒದಗಿಸುವ ಸಲುವಾಗಿ ನೀರಾವತಿ ಯೋಜನೆಗೆ ಒತ್ತನ್ನು ಕೊಟ್ಟಿದ್ದಾರೆ. ಮೂರು ವರ್ಷದಲ್ಲಿ ಆ ಕಾರ್ಯಕ್ರಮವನ್ನು ಮುಗಿಸಬೇಕೆಂದು ಹೇಳಿ ಅದಕ್ಕೆ ಸಂಪನ್ಮೂಲವನ್ನು ಕ್ರೋಢೀಕರಿಸಿ ಅದಕ್ಕೆ ಈಗಾಗಲೇ 45–50 ಸಾವಿರ ಕೋಟಿ ರೂ.ಗಳ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಅಂಥ ಒಂದು ಬೃಹತ್ ಕಾರ್ಯಕ್ರಮ ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗಿರುಕ್ಕಂಥ ಬಯಲು ಸೀಮೆ ಪ್ರದೇಶಗಳಿಗೆ ನೀರನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದಾರೆ. ಇವತ್ತು ಅದೇ ಸಂದರ್ಭದಲ್ಲಿ "ಇಂದ್ರಮ್ಮ ಇಲ್ಲು" ಎಂದು ಹೇಳಿ ಮನೆ ಕಟ್ಟತಕ್ಕಂಥ ಕಾರ್ಯಕ್ರಮ, ಯಾರಿಗೆ ಮನೆ ಇಲ್ಲ ಅಂಥವರೆಲ್ಲರಿಗೂ ಮನೆ ಕೊಡುವಂಥ ಕಾರ್ಯಕ್ರಮವನ್ನು ಮಾಡಿ ಇವತ್ತು ಆಂಧ್ರಪ್ರದೇಶದಲ್ಲಿ ಸರ್ಕಾರವೇ ಮನೆ ಕಟ್ಟಿಸಿ ಕೊಡುವಂಥ ಕೆಲಸವನ್ನು ಮಾಡುತ್ತಿದೆ. ನಾವು ಮನೆ ಕೊಟ್ಟರೆ ಬಡವರಿಗೆ ಮನೆ ಕಟ್ಟುವಂಥ ಶಕ್ತಿ ಇವತ್ತು ಅವರಿಗೆ ಇಲ್ಲ, ಯಾರೂ ಮನೆ ಕಟ್ಟುತ್ತಿಲ್ಲ. ಅವರ ಜನಪ್ರೀಯತೆಯಿಂದ ಸರ್ಕಾರವೇ ಮನೆ ಕಟ್ಟುವಂಥ ಕಾರ್ಯಕ್ರಮವನ್ನು ಮಾಡುತ್ತಿದೆ. ಇದರ ಜೊತೆಗೆ ಆರೋಗ್ಯ ವಿಚಾರದಲ್ಲಿ ಒಂದು ಕ್ರಾಂತಿಕಾರಕವಾದ ಕಾರ್ಯಕ್ರಮವನ್ನು ಅಲ್ಲಿ ತಂದಿದ್ದಾರೆ. ಈ ರೀತಿಯಾಗಿ ಜನಪ್ರಿಯವಾದಂಥ ಕಾರ್ಯಕ್ರಮಗಳನ್ನು ತಂದು ಇವತ್ತು ಜನಪ್ರಿಯ ಮುಖ್ಯಮಂತ್ರಿಗಳು ಎಂದು ಹೇಳಿ ಬಹುಶಃ ಈ ರಾಷ್ಟ್ರದಲ್ಲಿ ಯಾರಿಗೂ ಸಿಗದಿರುವಂಥ ಒಂದು ವಿಶೇಷವಾದ ಅನುಕಂಪ ಸಿಕ್ಕು ಸುಮಾರು 200ಕ್ಕೂ ಮೇಲ್ಮಟ್ಟು ಜನರು ಆತ್ಮಹತ್ಯೆ ಮಾಡಿಕೊಂಡಿರುವಂಥದ್ದು ಬಹುಶಃ ಯಾವುದೇ ಒಬ್ಬ ವೈಯಕ್ತಿಕವಾದಂಥ ವ್ಯಕ್ತಿಗೆ ಇಂತಹ ಅವಕಾಶ ಇಲ್ಲ ಎನ್ನುವಂಥದ್ದನ್ನು ನಾವು ನೆನಪಿಸಿಕೊಳ್ಳ ಬೇಕಾಗಿದೆ. ನಾನು ಇಂತಹ ಒಂದು ಸಂದರ್ಭದಲ್ಲಿ ಅವರು ನಮ್ಮ ರಾಷ್ಟ್ರಕ್ಕೆ ಮತ್ತು ಆಂಧ್ರಪ್ರದೇಶಕ್ಕೆ ಮತ್ತು ಅವರ ಕುಟುಂಬಕ್ಕೂ ಸಹ ಅಪಾರವಾದಂಥ ನಷ್ಟ ಆಗಿರುವಂಥದ್ದನ್ನು ಭರಿಸುವಂಥ ಆ ಶಕ್ತಿ ಅವರ ಕುಟುಂಬಕ್ಕೆ ಬರಬೇಕು. ಆ ರಾಜ್ಯದ ಜನರಿಗೆ ಬರಬೇಕು. ಅವರು ಹಾಕಿಕೊಂಡಿರುವಂಥ ಜಲಯಜ್ಞ ಮತ್ತು ಆರೋಗ್ಯ ಕಾರ್ಯಕ್ರಮಗಳು ಏನಿವೆ ಅವುಗಳನ್ನು ನೋಡಿಕೊಂಡು ಬರಲು ನಮ್ಮ ಜನಪ್ರತಿನಿಧಿಗಳನ್ನು ಕಳುಹಿಸಿ, ದಯವಿಟ್ಟು ಅಂತಹ ಒಂದು ಕಾರ್ಯಕ್ರಮವನ್ನು ನಮ್ಮ ಬಯಲು ಸೀಮೆ ಪ್ರದೇಶಕ್ಕೆ ಕೊಡುವಂಥದ್ದಕ್ಕೆ ಪ್ರಯತ್ನವನ್ನು ನಮ್ಮ ಸಭಾನಾಯಕರು ಮಾಡಬೇಕು. ಈ

ರಾಜ್ಯಕ್ಕೆ ಒಂದು ವಿಶೇಷವಾದಂಥ ಕೊಡುಗೆಯನ್ನು ಕೊಡತಕ್ಕಂಥ ಕೆಲಸ ಆಗಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳಿ ನಾನು ಅವರಿಗೆ ಹಾರೈಸಿ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರ ಕುಟುಂಬಕ್ಕೆ ಮತ್ತೊಮ್ಮೆ ಆ ನಷ್ಟವನ್ನು ಭರಿಸುವಂಥ ಶಕ್ತಿಯನ್ನು ಆ ಭಗವಂಥ ಕೊಡಲಿ ಎಂದು ಹೇಳಿ ತಮ್ಮ ಮುಖಾಂತರ ಆ ಕುಟುಂಬಕ್ಕೆ ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತು ಹಿರಿಯರಾಗಿದ್ದಂಥ ಶ್ರೀ ಎಸ್.ರುದ್ರಪ್ಪನವರು ಮತ್ತು ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರ ನಿಧನಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ, ಮುಖ್ಯವಾಗಿ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿ ಕೇವಲ ಆಂಧ್ರಪ್ರದೇಶ ರಾಜ್ಯಕ್ಕೆ ಸೀಮಿತವಾಗದೆ ಇಡೀ ರಾಷ್ಟ್ರ ಮೆಚ್ಚುವಂಥ ಒಂದು ಜನಪ್ರಿಯ ನಾಯಕರಾಗಿ ಸುಮಾರು 5 ಬಾರಿ ಶಾಸಕರಾಗಿ 4 ಬಾರಿ ಸಂಸದರಾಗಿ ಆಂಧ್ರಪ್ರದೇಶದ ವಿರೋಧ ಪಕ್ಷದ ನಾಯಕರಾಗಿ ಎರಡು ಬಾರಿ ಮುಖ್ಯಮಂತ್ರಿಗಳಾಗಿ ಮತ್ತು ಆಂಧ್ರಪ್ರದೇಶದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಎಲ್ಲದಕಿಂತ ಮುಖ್ಯವಾಗಿ ನಮ್ಮ ಬಳ್ಳಾರಿಯಲ್ಲಿ 7 ರಿಂದ 10ನೇ ತರಗತಿಯವರೆಗೆ ಓದಿ ನಂತರ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಅವರ ವೈದ್ಯಕೀಯ ಕೋರ್ಸ್‌ನ್ನು ಮುಗಿಸಿಕೊಂಡ ಒಬ್ಬ ರಾಜಕಾರಣಿ. ರಾಜಕಾರಣಿ ಎಂದರೆ, ಅವರನ್ನು ನೋಡಿದ ತಕ್ಷಣ ಯಾರಾದರೂ ಕೂಡ ಪಕ್ಷಬೇಧವನ್ನು ಮರೆತು ಎರಡು ಕೈಗಳನ್ನು ಜೋಡಿಸಿ ನಮಸ್ಕಾರ ಮಾಡುವಂಥ ಒಂದು ವ್ಯಕ್ತಿತ್ವ. ಇವತ್ತು ರೈತರ ಪರವಾಗಿ ಸಾಮಾನ್ಯ ಜನರ ಪರವಾಗಿ ಮಹಿಳೆಯರ ಪರವಾಗಿ ಸರ್ವಾಂಗೀಣ ಪ್ರಗತಿ. ಆಂಧ್ರಪ್ರದೇಶದಲ್ಲಿ ಮೊಟ್ಟಮೊದಲನೆಯದಾಗಿ ಮುಖ್ಯಮಂತ್ರಿಯಾದಾಗ ಒಂದು ಮಾತನ್ನು ಹೇಳುತ್ತಿದ್ದರು.

12-30 PM

ಅವರು ಒಂದು ಭಾಗದಲ್ಲಿ ಹೇಳುತ್ತಿದ್ದರು, ಅವರು ಮೊಟ್ಟಮೊದಲ ಬಾರಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಯಾದಾಗ ಸಾರ್ವಜನಿಕ ಸಭೆಗಳಲ್ಲಿ ಯಾರಾದರೊಬ್ಬರು ಮನೆಯಿಲ್ಲ ಎಂದು ಕೈಯನ್ನು ಎತ್ತಿದರೆ ಆನಂತರ ಬರುವ ದಿನಗಳಲ್ಲಿ ನಾನು ಚುನಾವಣೆಯಲ್ಲಿ ನಿಲ್ಲುವುದಿಲ್ಲವೆಂದು ಹೇಳಿದಂತಹ ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು. ಅವರು 5 ವರ್ಷದ ನಂತರ ಮುಖ್ಯಮಂತ್ರಿಯಾದ ಮೇಲೆ ಆ ರಾಜ್ಯದಲ್ಲಿ ಎಷ್ಟೋ ಒಂದು

ರಾಜಕೀಯ ಧ್ರುವೀಕರಣಗಳಾಗುವಂತಹ ಒಂದು ವಿಚಿತ್ರವಾದಂತಹ ಸನ್ನಿವೇಶವನ್ನು ಕೂಡ ಎದುರಿಸಿದ್ದರು. ಅವರ ಒಂದು ಜನಪ್ರಿಯತೆ ಎಷ್ಟರ ಮಟ್ಟಿಗೆ ಇದೆ ಎನ್ನುವುದಕ್ಕೆ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿ ಯಾಗಿರುವುದು ಅತಿ ದೊಡ್ಡ ನಿದರ್ಶನವಾಗಿದೆ. ವಿಶೇಷವಾಗಿ ಸುಮಾರು 1,60,000 ಕೋಟಿ ನೀರಾವರಿ ಯೋಜನೆಗಳು, ಇವತ್ತು ಸುಮಾರು 1 ಕೋಟಿ ಮಹಿಳೆಯರನ್ನು ಲಕ್ಷಾಧೀಶರನ್ನಾಗಿ ನಾನು ಮಾಡಬೇಕು ಎಂದು ಅವರು ತೊಟ್ಟಿರುವಂತಹ ಪಣ, ಇವತ್ತು ಎಲ್ಲಾ ಭಾಗದಲ್ಲಿ ಅವರ ಸಾಧನೆಗಳು ಬಗ್ಗೆ ನಮ್ಮ ಹಿರಿಯರು ಹೇಳಿದ್ದಾರೆ. ಅಲ್ಲಿ ಆಂಧ್ರದಲ್ಲಿ ವಿಶೇಷವಾಗಿ ರಾಯಲ್‌ಸೀಮಾ ಭಾಗದಲ್ಲಿ ಕೇವಲ ಮಳೆಗೆ ಮಾತ್ರ ಆಧಾರಪಟ್ಟು ಬದುಕುವಂತಹ ರೈತರಿಗೆ ನೀರಾವರಿಯನ್ನು ಕೊಡಬೇಕೆಂದು ಅವರು ಮಾಡಿರುವಂತಹ ಒಂದು ಪ್ರಮಾಣಿಕವಾದಂತಹ ಪ್ರಯತ್ನ ಇದರ ಜೊತೆಗೆ ಇಡೀ ಆಂಧ್ರ ರಾಜ್ಯದಲ್ಲಿ ಒಬ್ಬ ದೇವರು ಮಾಡುವಂತಹ ಕೆಲಸವನ್ನು ಆ ಮನುಷ್ಯ ಮಾಡಿದ್ದಾನೆಂದು ಇವತ್ತು ಮನೆಮನೆಯಲ್ಲಿಯೂ ಕೂಡ ಸಾಮಾನ್ಯ ಜನರು ಮಾತನಾಡುತ್ತಾರೆ. ಹಾಗಾಗಿ ದೇವರಿಗೆ ಅವರ ಮೇಲೆ ದೃಷ್ಟಿ ಬಿದ್ದು ತೆಗೆದುಕೊಂಡು ಹೋಗಿದ್ದಾರೆಂದು ಹೇಳಿ ಸಾಮಾನ್ಯ ಜನರು ಮಾತನಾಡುವಂತಹ ಮಾತಾಗಿದೆ. ಅದರಲ್ಲೂ ವಿಶೇಷವಾಗಿ ನಮ್ಮ ಕುಟುಂಬಕ್ಕೆ ಅವರ ಜೊತೆಯಲ್ಲಿ 21 ವರ್ಷದ ಒಂದು ಪರಿಚಯವಿದೆ. ನನ್ನ 21 ವರ್ಷದ ವಯಸ್ಸಿನಿಂದ ಅವರು ನನ್ನನ್ನು ಗಮನಿಸಿದ್ದಾರೆ. ಯಾವುದೇ ಒಂದು ರೀತಿಯಲ್ಲಿಯೂ ಕೂಡ ವ್ಯಾಪಾರ ಮತ್ತು ವ್ಯವಹಾರಗಳಲ್ಲಿಯೂ ಕೂಡ ಆಗಿರಬಹುದು. ಇವತ್ತು ವೈಯಕ್ತಿಕವಾಗಿ ಒಬ್ಬ ಮನುಷ್ಯನನ್ನು ನಂಬಿದರೆ ಯಾವ ಮಟ್ಟಕ್ಕಾದರೂ ಕೂಡ ಆ ಮನುಷ್ಯನನ್ನು ಕೊನೆಯ ಉಸಿರಿರುವ ತನಕ ಅವರು ಕೈಬಿಡುವುದಿಲ್ಲ ಎನ್ನುವುದಕ್ಕೆ ಒಬ್ಬ ಸಾಮಾನ್ಯ ಮನುಷ್ಯರಿಂದ ಹಿಡಿದು ನಮ್ಮಂತರಾಗಿರಬಹುದು, ಯಾರೇ ಕೂಡ ಆಗಿರಬಹುದು ನಂಬಿಕೆಗೆ ಅರ್ಹರು ಎಂದರೆ ಅದು ವೈ.ಎಸ್.ರಾಜಶೇಖರ ರೆಡ್ಡಿಯವರು. ಇಡೀ ಒಂದು ದೇಶದಲ್ಲಿ ಇವತ್ತು steel ರಂಗದಲ್ಲಿ ನಾನು ಒಬ್ಬ Industrialist ಆಗಿರುವುದಕ್ಕೆ ಅದರಲ್ಲಿ ನಾನು ಗುರುತಿಸಿಕೊಳ್ಳುವಂತಹ ಸೌಭಾಗ್ಯ ಇವತ್ತು ಯಾರಾದರೂ ಕಲ್ಪಿಸಿದ್ದಾರೆಂದರೆ ಅದು ನಮ್ಮ ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರು. ಇವತ್ತು ಯಾವುದೇ ಒಂದು ರೀತಿಯಲ್ಲಿಯೂ ಕೂಡ ಯಾವುದೇ ಒಂದು ಪಕ್ಷಬೇಧವಿಲ್ಲದೇ ಒಂದು

ಮಾನವೀಯತೆಯನ್ನು ಮೆರೆಯುವಂತಹ ಒಂದು ಉತ್ತಮವಾದ ವ್ಯಕ್ತಿ ಅವರು. ಇವತ್ತು ಅವರ ಮರಣ ಕೇವಲ ಆಂಧ್ರ ರಾಜ್ಯಕ್ಕಲ್ಲಾ, ಇವತ್ತು ನಮ್ಮ ಭಾರತ ರಾಷ್ಟ್ರಕ್ಕೆ ಅಲ್ಲ, ವಿಶ್ವಕ್ಕೆ ತುಂಬಲಾರದಂತಹ ನಷ್ಟವುಂಟಾಗಿದೆ. ಇವತ್ತು ನಮ್ಮ ಹಿರಿಯರಾಗಿರುವಂತಹ ನಮ್ಮ ಲಾಲ್‌ಕೃಷ್ಣ ಅಡ್ವಾನಿಯವರು ಕೂಡ ಹೇಳಿದರು, ಇವತ್ತು ಡಾ: ವೈ.ಎಸ್.ರಾಜಶೇಖರ ರೆಡ್ಡಿಯವರ ಆಡಳಿತದಲ್ಲಿ ಅವರು ಹೇಗೆ ಇವತ್ತು ಮಾರ್ಗದರ್ಶಿಯಾಗಿದ್ದಾರೆ ಅವರನ್ನು ನೋಡಿ ಇವತ್ತು ನಾವು ಸುಮಾರು ಯೋಜನೆಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿಯೂ ಕೂಡ ರೂಪಿಸಬೇಕೆನ್ನುವಂತಹ ಮಾತನ್ನು ಹೇಳಿದ್ದಾರೆ. ಇವತ್ತು ಸನ್ಮಾನ್ಯ ಡಾ: ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ನಾವು ಮತ್ತು ಶ್ರೀರಾಮುಲು ರವರು ಸಚಿವರಾದ ತಕ್ಷಣ 24 ಗಂಟೆಗಳ ತಾಸಿನಲ್ಲಿ ನಾವು ವೈ.ಎಸ್.ರಾಜಶೇಖರ ರೆಡ್ಡಿಯವರ ಮುಂಭಾಗದಲ್ಲಿ ಹೋಗಿ ಅವರ ಜೊತೆಯಲ್ಲಿ ಮಾತನಾಡಿದ್ದೇವೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಏನು "108 ಆರೋಗ್ಯ ಕವಚ" ಎಂದು ಹೇಳಿ ಇವತ್ತು ಅವರು ಮೊಟ್ಟಮೊದಲು ಆಂಧ್ರದಲ್ಲಿ ಪ್ರಾರಂಭ ಮಾಡಿದ ಮೇಲೆ ಆನಂತರ ಗುಜರಾತ್ ಆಗಿರ ಬಹುದು, ತಮಿಳುನಾಡು, ಕೇರಳ ಮತ್ತು ನಮ್ಮ ಕರ್ನಾಟಕದಲ್ಲಿ ಆಗಿರಬಹುದು, ಇವತ್ತು 108 ಎನ್ನುವುದು ಕೂಡ ಅವರ ಮಾರ್ಗದರ್ಶನದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಮಾಡಿದ್ದೇವೆ. ಅದೇ ರೀತಿಯಾಗಿ "ಸುವರ್ಣ ಆರೋಗ್ಯ ಸುರಕ್ಷಾ" ಎಂದು ಹೇಳಿ ಬಡವರಿಗೆ 2 ಲಕ್ಷ ರೂಪಾಯಿಗಳ ತನಕ ಉಚಿತವಾಗಿ ಆಪರೇಷನ್‌ಗೆ ಇವತ್ತು private corporate ಆಸ್ಪತ್ರೆಗಳಲ್ಲಿಯೂ ಕೂಡ ಇವತ್ತು ಸಾಮಾನ್ಯ ಜನರು ಅಲ್ಲಿಗೆ ಹೋಗಿ ತೋರಿಸಿಕೊಳ್ಳುವಂತಹ ಒಂದು ಅವಕಾಶವಿದೆ. ಇವತ್ತು ಆಂಧ್ರದಲ್ಲಿ ಅವರು "ರಾಜೀವ್ ಆರೋಗ್ಯ ಶ್ರೀ" ಎಂದು ಮಾಡಿದ್ದಾರೆ. ಅದನ್ನೆ ನಮ್ಮ ಕರ್ನಾಟಕದಲ್ಲಿ "ಸುವರ್ಣ ಆರೋಗ್ಯ ಶ್ರೀ" ಎಂದು ಹೇಳಿ "ಸುವರ್ಣ ಆರೋಗ್ಯ ಸುರಕ್ಷಾ" ಎಂದು ಹೇಳಿ ಇವತ್ತು ನಾವು ಅದನ್ನು ಜಾರಿಗೆ ತಂದಿದ್ದೇವೆ. ಇವತ್ತು ಆ ಮಹಾಪುರುಷನ ಬಗ್ಗೆ ಆ ಯುಗಪುರುಷನ ಬಗ್ಗೆ ಎಷ್ಟು ಹೇಳಿದರೂ ಕೂಡ ಅದು ಕಡಿಮೆ ಎನಿಸುತ್ತದೆ. ಇವತ್ತು ನನಗೆ ಬಹಳಷ್ಟ ಅವರ ಜೊತೆಯಲ್ಲಿದ್ದಂತಹ ಆತ್ಮೀಯತೆ ಇವತ್ತು ಈ ಸದನದಲ್ಲಿ ಸಂತಾಪ ಸೂಚನೆಯನ್ನು ಮಾಡುವುದಕ್ಕೆ ನನಗೆ ಅವಕಾಶ ಸಿಕ್ಕಿರುವುದು, ಇವತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ಅವರ ಇಡೀ

ಕುಟುಂಬವರ್ಗದವರಿಗೆ ಭಗವಂತ ಇನ್ನು ಹೆಚ್ಚಿನ ಶಕ್ತಿಯನ್ನು ಕೊಟ್ಟು ಅವರ ಮಾರ್ಗದಲ್ಲಿಯೇ ಅವರ ಕುಟುಂಬವರ್ಗದವರು ರಾಜ್ಯದ ಜನರಿಗೆ ಇಡೀ ದೇಶಕ್ಕೆ ಸೇವೆಯನ್ನು ಮಾಡಬೇಕೆಂದು ಬಯಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಸಭಾಧ್ಯಕ್ಷರೆ, ಈ ಸಂತಾಪ ಸೂಚನೆಯಲ್ಲಿ ಈ ಸಭೆಯನ್ನು ತಾವು ಈ ನಿಲುವಳಿಯನ್ನು ಮಂಡಿಸಿದ್ದಿರಿ. ನಾನು ಇದನ್ನು ಅನುಮೋದಿಸುತ್ತಾ ಒಂದೆರಡು ಮಾತು ಗಳನ್ನು ಆಡುವುದಕ್ಕೆ ಬಯಸುತ್ತೇನೆ. ಕನಕದಾಸರು ಒಂದು ಮಾತನ್ನು ಹೇಳುತ್ತಾರೆ.

> "ಸತ್ತವರಿಗೆ ಅಳಲೇಕೆ, ಹೊತ್ತವರು ಪೆತ್ತವರುಗಳು ತಾ,
> ಸತ್ತುಹೋಗುವರಲ್ಲದೆ ಉಳಿವರೆ, ಮರುಗಲೇಕೇ ಇನ್ನು,
> ಮೃತ್ಯು ಎನ್ನ ಬೆನ್ನಹಿಹುದು, ನಾವಿನ್ನು ಅತ್ತು ಮಾಡುವುದೇನು,
> ಪೂರ್ವದತೆತ್ತಿಗನು, ನೀ ನೀಗೋ ರಕ್ಷಿಸೊ ನನ್ನ ನಾ ಅನವರತ,
> ನೀ ನೀಗೋ ರಕ್ಷಿಸೊ ಅನವರತ, ನೀ ನೀಗೋ ರಕ್ಷಿಸೋ
> ಅನವರತ"

ಅಂದರೆ ಸತ್ತವರಿಗೆ ನಾವು ಅತ್ತು ಏನು ಪ್ರಯೋಜನ. ಅವರು ಬದುಕಿದ್ದಂತಹ ಸಂದರ್ಭದಲ್ಲಿ ನಾವು ಏನು ಮಾಡಿದ್ದೇವೆ, ನಮಗೆ ಯಾರು ಜನ್ಮವನ್ನು ಕೊಟ್ಟರು, ಅವರು ಬದುಕಲಿಲ್ಲ, ಯಾರು ನಮ್ಮನ್ನು ಹೊತ್ತಿದರು, ಯಾರು ನಮ್ಮನ್ನು ಬೆಳೆಸಿದರು ಅವರು ಬದುಕಲಿಲ್ಲ, ಬೆನ್ನ ಹಿಂದೆಯೇ ಮೃತ್ಯು ಇವತ್ತು ನಿಂತಿದೆ, ನನ್ನನ್ನು ರಕ್ಷಿಸು, ನನ್ನನ್ನು ರಕ್ಷಿಸು ಎಂದು ಹೇಳಿ ಕನಕದಾಸರು ಹೇಳುತ್ತಿದ್ದಾರೆ. ಇಲ್ಲಿ ಒಂದು ದೊಡ್ಡ ವಿಚಾರವೆಂದರೆ the biggest question is life is death, the answer to death is life ನಾವು ಏನು ಮಾಡಿದ್ದೇವೆ ಎನ್ನುವುದು ಕೂಡ ಇಲ್ಲಿ ಚಿಂತೆ. ವೈ.ಎಸ್.ಆರ್. ರಾಜಶೇಖರ ರೆಡ್ಡಿಯವರು ನಾನು ಬಹಳ ಚಿಕ್ಕಂದಿನಿಂದ ಅವರಿಗೆ ಪರಿಚಯ ಮಾನ್ಯ ಅಧ್ಯಕ್ಷರೆ, ನಾನು ಒಬ್ಬ ವಿದ್ಯಾರ್ಥಿ ನಾಯಕನಿದ್ದಾಗ ಮಾಜಿ ಪ್ರಧಾನ ಮಂತ್ರಿಯವರಾದ ದಿ. ಶ್ರೀ ರಾಜೀವ್‌ಗಾಂಧಿ ಯವರು ಅವರನ್ನು ಬಿಸಿಸಿ ಅಧ್ಯಕ್ಷರಾಗಿ ಬಹಳ ಚಿಕ್ಕವಯಸ್ಸಿನಲ್ಲಿಯೇ 32–33 ವಯಸ್ಸಿನಲ್ಲಿ ಮಾಡಿದ್ದರು.

ಶ್ರೀ ರಮಾನಾಥ ರೈ ಅವರು ಈ ಸಭೆಯಲ್ಲಿ ಇಲ್ಲ. ನಾವೆಲ್ಲರೂ ಅಲ್ಲಿ ದೊಡ್ಡ ಸಮಾವೇಶ ಮಾಡುವಂತಹ ಸಂದರ್ಭದಲ್ಲಿ ತಿರುಪತಿಗೆ ಹೋಗಿದ್ದೆವು. ಅಲ್ಲಿ ಊಟಕ್ಕೆ ಗಲಾಟೆಯಾಗಿ ನಾವಿಬ್ಬರು ಸೇರಿ ಆ ಸಂದರ್ಭದಲ್ಲಿ ತಿರುಪತಿ–ಜೋಲಾರ್‌ಪೇಟೆ ದಾರಿಯಲ್ಲಿ ಜೋಲಾರಪೇಟೆ ಪೊಲೀಸ್ ಸ್ಟೇಷನ್‌ನಲ್ಲಿ ಲಾಠಿ ಏಟು ತಿಂದು ನಾವಿಬ್ಬರು ಅಲ್ಲಿ ಇದ್ದೆವು. ಅಲ್ಲಿದ್ದಂತಹ ಸಂದರ್ಭದಲ್ಲಿ ಅವರಿಗೆ ತಕ್ಷಣ ಈ ಹುಡುಗರಿಗೆ ಈ ರೀತಿಯಾಗಿದೆ ಎಂದು ಹೇಳಿ ವಿಚಾರ ಅವರಿಗೆ ತಿಳಿಯಿತು. ಅವರು ತಕ್ಷಣ ಅದೆಷ್ಟೋ ಸೆಕೆಂಡ್‌ನಲ್ಲಿ ಆ ವಿಚಾರವು ತಿಳಿದ ತಕ್ಷಣ ಒಬ್ಬ ಕಾರ್ಯ ಕರ್ತನಿಗೆ ರಕ್ಷಣೆಯನ್ನು ಮಾಡಬೇಕೆಂದು ಅವರು ತೆಗೆದುಕೊಂಡಂತಹ ನಿರ್ಧಾರ, ತೀರ್ಮಾನ, ಆ ಒಂದು ಬಾಂಧವ್ಯ ಯುವಕರ ಬಗ್ಗೆ, ಬಹುಶಃ ನಾನು ನಿಜವಾಗಲೂ ಅದನ್ನು ನೆನೆಸಿಕೊಂಡರೆ ನನಗೆ ಮೈ ಜುಮ್ಮೆನಿಸುತ್ತದೆ. ನಾನು ಅನೇಕ ಸಂದರ್ಭಗಳಲ್ಲಿ ಹೇಳುತ್ತಿರುತ್ತೇನೆ.

"ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ,
ಜನನ ಉಚಿತ, ಮರಣ ಖಚಿತ"

ಎಂದು ಈ ಹುಟ್ಟು ಮತ್ತು ಸಾವಿನ ಮಧ್ಯದಲ್ಲಿ ಯಾರು ಏನು ಮಾಡಿದ್ದಾರೆನ್ನುವುದು ಬಹಳ ಮುಖ್ಯವಾದಂತಹ ವಿಚಾರ. ಅದನ್ನು ನನ್ನ ಸ್ನೇಹಿತರು ಅನೇಕರು ಮಾತನಾಡಿದ್ದರು ಅವರು ಬದುಕಿದಾಗ ನಡೆಸಿದರು, ಅವರಿಗೆ ಅವಕಾಶ ಸಿಕ್ಕಿದಂತಹ ಸಂದರ್ಭದಲ್ಲಿ ಏನು ಮಾಡಿದ್ದಾರೆ ಅಂತ ಹೇಳಿ ವಿಚಾರವನ್ನು ಅವರು ಪ್ರಸ್ತಾವನೆಯನ್ನು ಮಾಡಿದರು. ನನ್ನ ಪ್ರಕಾರ ಶ್ರೀ ರಾಜಶೇಖರ ರೆಡ್ಡಿಯವರಿಗೆ it was not the age to die, nor it was the way to die. ಇದನ್ನು ಬಹುಶಃ ನಾವೆಲ್ಲರೂ ಕೂಡ ಈ ರಾಷ್ಟ್ರದ ಜನರು ಅದನ್ನು ನೋಡಿ ನಾವು ಒಪ್ಪಿದ್ದೇವೆ. ಏಕೆಂದರೆ, ಅವರಿಗೆ ಗೊತ್ತಿತ್ತು ಎರಡೇ ವಿಚಾರ. Friends ಯಾರು? Enemies ಯಾರು? ಎಂದು. ಈ ಮಧ್ಯದಲ್ಲಿ 50–50 ಮಾಡಿದ್ದನ್ನು ನಾನಂತೂ ನೋಡಿಲ್ಲ. ನೇರವಾಗಿ ಅವರ ಆಚಾರ, ಅವರ ವಿಚಾರಗಳನ್ನು ತಿಳಿಸಬೇಕಾದರೆ ಏಕೆಂದರೆ, ಅವರಿಗೆ ಒಂದು ಅವಕಾಶವನ್ನು ಒಂದು ಸ್ಥಾನದಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ಆ ಸ್ಥಾನಕ್ಕೆ ಅಧಿಕಾರಕ್ಕೆ ಯಾವ ರೀತಿಯಾಗಿ ಮೆರಗನ್ನು ಕೊಡಬೇಕು, ಒಬ್ಬರನ್ನು ನಂಬಿದಂತಹ ಸಂದರ್ಭದಲ್ಲಿ ಯಾವ ರೀತಿಯಾಗಿ ನಂಬಿದವರಿಗೆ ನಾನು

ರಕ್ಷಣೆಯನ್ನು ಮಾಡಬೇಕೆಂದು ಹೇಳಿ, ಯಾವುದಾದರೂ ಈ ರಾಷ್ಟ್ರದಲ್ಲಿ ಒಬ್ಬ ರಾಜಕಾರಣಿಗೆ ಒಂದು ಉದಾಹರಣೆ ಇದೆ ಎಂದು ಹೇಳಿದರೆ ಇದು ರಾಜಶೇಖರ್ ರೆಡ್ಡಿಯವರದು ಎನ್ನುವುದನ್ನು ನಾನು ನಿತ್ಯ ನನ್ನ ಮತ್ತು ಅವರಿಗೆ ಇದ್ದಂತಹ ಸಣ್ಣ ಸ್ನೇಹದಲ್ಲಿ ಭಾಂದವ್ಯದಲ್ಲಿ ಇದನ್ನು ನಾನು ನೋಡಿದ್ದೇನೆ. ಇವತ್ತು ನಮ್ಮ ಪಕ್ಷ ಮಾತ್ರ ಅವರಿಗೆ ಕುಟುಂಬ ಆಗಿರಲಿಲ್ಲ, ಅವರ ಮನೆಯವರು ಮಾತ್ರ ಅವರ ಕುಟುಂಬ ಅಲ್ಲ. ಅವರ ರಾಜ್ಯ ಮಾತ್ರ ಅವರಿಗೆ ಒಂದು ಕುಟುಂಬವಲ್ಲ. ನನಗೆ ಅವರು ಅನೇಕ ಸಂದರ್ಭದಲ್ಲಿ ಹೇಳುತ್ತಿದ್ದರು there is no border between Andhra Pradesh and Karnataka ಎಂದು ಯಾವುದೋ ಒಂದು ಸಂದರ್ಭದಲ್ಲಿ ಚರ್ಚೆಯನ್ನು ಮಾಡಬೇಕಾದರೆ ನಮ್ಮಿಬ್ಬರಿಗೂ border ಇಲ್ಲ ಶಿವಕುಮಾರ್ ಎನ್ನುವಂತಹ ವಿಚಾರವನ್ನು ಪ್ರಶ್ನೆಯನ್ನು ಮಾಡುತ್ತಿದ್ದರು. ನನಗೆ ಮನಸ್ಸಿಗೆ ಬಹಳ ದುಗುಡವಾಗುತ್ತಿದೆ ಬಹಳ ನೋವಾಗುತ್ತಿದೆ. ಹಿಂದಿನ ದಿನ ಸಾಯಂಕಾಲ ನಾನು ಮತ್ತು ಶ್ರೀ ವಿಲಾಸರಾವ್ ದೇಶಮುಖ್ ಸಾಹೇಬರು, ನರೇಂದ್ರ ಬಾಬು, ಪಿ.ಎಂ.ಆಶೋಕ್‌ರವರು ಒಂದು ಬಿಹೆಚ್‌ಇಎಲ್ ಕಾರ್ಯಕ್ರಮಕ್ಕೆ ಹೋಗಿದ್ದೆವು. ಅಲ್ಲಿಗೆ ಹೋಗಿ ಮುಗಿಸಿಕೊಂಡು ಬರುತ್ತಿದ್ದಂತಹ ಸಂದರ್ಭದಲ್ಲಿ ಆದ ಮೇಲೆ ಅವರು West End Hotel ನಲ್ಲಿದ್ದಂತಹ ಸಂದರ್ಭದಲ್ಲಿ ಸಾಯಂಕಾಲ 7–8 ಗಂಟೆಗಳ ಹೊತ್ತಿಗೆ ನಾವು ವಿಲಾಸ್‌ರಾವ್ ದೇಶಮುಖ್ ರವರಿಗೆ ಫೋನ್ ಮಾಡಿದೆವು. ಅಲ್ಲಿ ತಿರುಪತಿಯಲ್ಲಿ 3ನೇ ತಾರೀಖು ಸಾವು ಆಯಿತಲ್ಲಾ ಆ ದಿನ. ತಿರುಪತಿಯಲ್ಲಿ ಬಿಹೆಚ್‌ಇಎಲ್‌ನ ದೊಡ್ಡ ಕಾರ್ಯಕ್ರಮವಿತ್ತು. ಅದಕ್ಕೆ ಮುಖ್ಯಮಂತ್ರಿ ಇವರನ್ನು ಮತ್ತು Prime Minister ರವರನ್ನು ಕೂಡ ಅಹ್ವಾನ ಮಾಡಿದ್ದರು. ಆ ವಿಚಾರದಲ್ಲಿ ನಾನು ಮುಂದಕ್ಕೆ ಹಾಕಿದ್ದೇನೆ. 5ನೇ ತಾರೀಖು ಬೇಡ ನನಗೆ ಬೇರೆ ಒಂದು ಕಾರ್ಯಕ್ರಮವಿದೆ ಎಂದು ಹೇಳಿ ಅವರಿಗೆ ಫೋನ್ ಮಾಡಿ ತಿಳಿಸಿದರು. ಆಗ ನಾನು ಫೋನ್ ಅವರಿಂದ ಪಡೆದುಕೊಂಡು ನಾನು ತಮ್ಮನ್ನು ಭೇಟಿ ಮಾಡಬೇಕೆಂದು ಇದ್ದೇನೆ ಎಂದು ಅವರಿಗೆ ಹೇಳಿದಾಗ ಅವರು "Come Shivakumar, next week we will meet" ಎಂದು ಹೇಳಿದರು. ಅದು ಆಗಿ ಮಾರನೇ ದಿವಸ ಹೆಚ್‌ಎಂಟಿಗೆ ಯಾವುದೋ ಒಂದು ವಿಸಿಟ್‌ಗೆ ಅವರು ಮತ್ತು ನಾವುಗಳೆಲ್ಲರೂ ಹೋಗುತ್ತಿರುವಂತಹ ಸಂದರ್ಭದಲ್ಲಿ ಈ ರೀತಿ ಹೆಲಿಕಾಪ್ಟರ್

ದುರಂತವಾಗಿದೆ ಎಂದು ಹೇಳಿ ನನಗೆ ತಿಳಿದಾಗ ನಿಜವಾಗಲೂ ಯಾವ ದಿಕ್ಕಿನಲ್ಲಿ ಮನುಷ್ಯ ಹೋಗುತ್ತಿದ್ದಾನೆ.

ಏನು ಎನ್ನುವುದು ಇವತ್ತಿಗೂ ಕೂಡ ನನಗೆ ಅರ್ಥವಾಗುತ್ತಿಲ್ಲ, ಏಕೆಂದರೆ ಎಷ್ಟೇ development ಇದ್ದರೂ ಕೂಡ, ವಿಜ್ಞಾನ, ತಂತ್ರಜ್ಞಾನ, ವಿದ್ಯೆ ಇದ್ದರೂ ಕೂಡ ಈ ಸಾವನ್ನು ಜಯಿಸಲಿಕ್ಕೆ ಯಾರ ಕೈಯಲ್ಲಿಯೂ ಸಾಧ್ಯವಾಗುತ್ತಿಲ್ಲ. ಸಾವನ್ನು ಜಯಿಸುವುದಿರಲಿ ಆ ವಿಧಿಯನ್ನು ನಮಗ್ಯಾರಿಗೂ ಕೂಡ ಹಿಡಿಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಇಂಥ ಸಂದರ್ಭಗಳು ಇವತ್ತು ನಿರ್ಮಾಣ ಆಗುತ್ತಿವೆ. ಆದರೆ ಅವರಿಗೆ ಈ ಸಂದರ್ಭದಲ್ಲಿ ಈ ಜೀವನದಲ್ಲಿ ಪ್ರಯಾಣ ಮಾಡುತ್ತಿದ್ದಾಗ ಈ ಸಾವಿನ ಬಗ್ಗೆ ಯಾವ ಸಂದರ್ಭದಲ್ಲಿಯೂ ಅವರು ಯೋಚನೆ ಮಾಡುತ್ತಿರಲಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ ಅನೇಕ ಸಂದರ್ಭದಲ್ಲಿ ಯಾವಾಗಲೋ ಭೇಟಿ ಮಾಡಿದಾಗ ನನಗೆ 60 ವರ್ಷಗಳಾದ ಮೇಲೆ ನಾನು ನಿವೃತ್ತನಾಗುತ್ತೇನೆಂಬ ಮಾತು ಅವರ ಬಾಯಿಯಲ್ಲ ಬರುತ್ತಿತ್ತು, ಅದ್ಯಾಕೆ ಬರುತ್ತಿತ್ತೋ ಏನೋ ನನಗಂತೂ ಅರ್ಥವಾಗುತ್ತಿಲ್ಲ. ಆದರೆ ಬೇಕಾದಷ್ಟು ಜನರು ಈ ಪ್ರಪಂಚದಲ್ಲಿ ಬದುಕಿ ಹೋಗಿದ್ದಾರೆ. ಬೇಕಾದಷ್ಟು ಜನ ಹೆಸರನ್ನು ಪಡೆದಿದ್ದಾರೆ, ಬೇಕಾದಷ್ಟು ಜನ ಶಾಶ್ವತ ನೆನಪನ್ನು ಇಟ್ಟಿದ್ದಾರೆ, ಹಾಗೆ ಇವತ್ತು ಅವರೂ ಕೂಡ ನಮ್ಮ ಪಕ್ಷದ ಒಬ್ಬ ನಾಯಕ ಎನ್ನುವುದು ಒಂದು ಕಡೆ ಪ್ರಶ್ನೆಯಾಗಿತ್ತು. ನಮ್ಮ ಸ್ನೇಹಿತ ಎನ್ನುವುದಿತ್ತು. ಅವರ ಜೀವನದಲ್ಲಿ ಅವರಿಗೆ ಅವಕಾಶ ಸಿಕ್ಕಿದಂಥ ಸಂದರ್ಭದಲ್ಲಿ ಬಡ ಜನತೆಗೋಸ್ಕರ ಕೊಟ್ಟಂಥ ಕಾರ್ಯಕ್ರಮ, ಚಿಂತನೆ ಇದೆಯೆಲ್ಲಾ ಅದು ಬಹುಶಃ ಮತ್ತೆ ಬೇಕಾದಷ್ಟು ಜನ ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದಿದ್ದಾರೆ. ಜನಪ್ರಿಯತೆ ಗಳಿಸಿದ್ದಾರೆ. ಎಲ್ಲಾ ಮಾಡಿದ್ದಾರೆ, ಆದರೂ ಕೂಡ ಆ ಸಂದರ್ಭದಲ್ಲಿ ಅವರು ಶಾಶ್ವತವಾಗಿ ಇಡೀ ನಮ್ಮ ರಾಷ್ಟ್ರದಲ್ಲಿ, ಆ ನಾಯಕತ್ವದಲ್ಲಿ ಈ ವಯಸ್ಸಿನಲ್ಲಿ ಅವರು ಪಡೆದಿರುವಂಥ ಒಂದು ಜನಪ್ರಿಯತೆ ಅಪಾರ. ಅವರ ಸ್ನೇಹಿತರಿರಬಹುದು, ಅವರ ವಿರೋಧಿಗಳ ಇರಬಹುದು. ಅವರ ವಿರೋಧಿಗಳಲ್ಲಿಯೂ ಕೂಡ ಅವರು ಯಾವ ರೀತಿ ಹೃದಯ ಶ್ರೀಮಂತಿಕೆಯನ್ನು ತೋರಿಸಿ ಅವರ ಮೆಚ್ಚುಗೆಯನ್ನು ಸಂಪಾದನೆಯನ್ನು ಮಾಡಿದ್ದರು ಅವೆಲ್ಲಾ ನೆನೆಸಿಕೊಂಡಾಗ ನಿಜವಾಗಲೂ ಅವರ ನಿಧನದ ನೋವನ್ನು ತಡೆಯಲಿಕ್ಕೆ ಆಗುತ್ತಿಲ್ಲ. ಅವರ ಕುಟುಂಬ, ಒಂದು ರಾಷ್ಟ್ರ ಅವರ ಕುಟುಂಬ ಎಂಬುದು ನಮ್ಮ ವೈಯಕ್ತಿಕವಾದಂತಹ ಅಭಿಪ್ರಾಯ. ಆದುದರಿಂದ ಅವರು ಇವತ್ತು ನಮ್ಮಲ್ಲಿ ಇನ್ನೂ ಬದುಕಿದ್ದಾರೆ,

ಅವರು ನಡೆದು ಬಂದಂಥ ರಾಜದಾರಿ ಇವೆಲ್ಲಾವನ್ನು ನಮ್ಮಂಥ ರಾಜಕಾರಣಿಗಳು ಆ ದಾರಿಯಲ್ಲಿ ನಾವು ನಡೆಯಬೇಕು ಎನ್ನುವುದು ನನಗಂತೂ ವೈಯಕ್ತಿಕವಾಗಿ ಆಸೆಯಿದೆ. ಅವರ ಹೋರಾಟ, ಅವರ ಹೋರಾಟದ ಗುಣಗಳು ಜೀವನದ ಉದ್ದಕ್ಕೂ ಪ್ರತಿಯೊಂದು ಹಂತದಲ್ಲಿಯೂ ಅವರು ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಕಾಲಭೈರವನ ಕೃತ್ಯ ಇದೆಯೆಲ್ಲಾ ಅದನ್ನು ನಾವು ಯಾರೂ ಕ್ಷಮಿಸಲಿಕ್ಕೆ ಸಾಧ್ಯವಿಲ್ಲ. ಅದು ನಮ್ಮ ಕೈಯಲ್ಲಿಲ್ಲ, ಯಾರೂ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. Every man is helpless. ಅದನ್ನು ತಡೆಯಲಿಕ್ಕೆ ಯಾರ ಕೈಯಲ್ಲಿಯೂ ಸಾಧ್ಯವಿಲ್ಲ. ಭರ್ತೃಹರಿ ಒಂದು ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತಾರೆ, "ಕ್ಷಣಂ ಚಿತ್ತಂ, ಕ್ಷಣಂ ವಿತ್ತಂ, ಕ್ಷಣಂ ಜೀವನ ಮೇವಚ, ಯಮಸ್ಯ ಕರುಣಾನಾಸ್ತಿ ತಸ್ಮಾತ್ ಜಾಗೃತಾ, ಜಾಗೃತಾ, ಜಾಗೃತಾ" ಎಂದು ಹೇಳುತ್ತಾರೆ, ಎಂದರೆ ಈ ಮನಸ್ಸು, ಹಣ ಇವೆರಡು ಕೂಡ ಬಹಳ ಚಂಚಲವಾದುದು. ಯಾವುದೂ ಕೂಡ ಶಾಶ್ವತವಾದುದಲ್ಲ. ಜೀವನ ಕೂಡ ಶಾಶ್ವತವಾದುದೇನಿಲ್ಲ. ಒಂದು ಉದಾಹರಣೆ ಏನೆಂದರೆ ಯಾರಿಗಾದರೊಬ್ಬರಿಗೆ ಹಣ ಕೊಡಬೇಕಾದರೆ, ದಾನ ಕೊಡಬೇಕಾದರೆ, ಯಾರಾದರೂ ಬಂದು ನಮ್ಮನ್ನು ಹತ್ತು ರೂಪಾಯಿ ಕೇಳುವಂಥ ಸಂದರ್ಭದಲ್ಲಿ ನಮ್ಮ ಜೇಬಿಗೆ ಕೈಹಾಕಿ ತೆಗೆದು ಕೊಡುವಷ್ಟರಲ್ಲಿ ನಮ್ಮ ಮನಸ್ಸು ಬದಲಾವಣೆ ಆಗಿಬಿಡುತ್ತದೆ. ಹಾಗೆ ಹಣ, ಮನಸ್ಸು ಎರಡೂ ಶಾಶ್ವತವಾದುದಲ್ಲ. ಹಾಗಾಗಿಯೇ ಕರ್ಣ ತನ್ನ ಕವಚ, ಕುಂಡಲವನ್ನು ತೆಗೆದು ಕೊಡಬೇಕಾದರೆ ಎಡಗೈಯಿಂದ ಬಲಗೈಗೆ ತೆಗೆದುಕೊಡುವಷ್ಟರಲ್ಲಿ ಮನಸ್ಸು ಬದಲಾವಣೆ ಆಗಿಬಿಡುತ್ತದೇನೋ ಎಂದು ಎಡಗೈಯಿಂದಲೇ ದಾನ ಮಾಡಿದನಂತೆ. ಜೀವನದಲ್ಲಿ ಅಧಿಕಾರ ಇದ್ದಂಥ ಸಂದರ್ಭದಲ್ಲಿ ನಾವು ಏನಾದರೂ ಒಬ್ಬರಿಗೆ ಸಹಾಯ ಮಾಡಬೇಕಾದರೆ, ನೀನು ಜಾಗೃತನಾಗಿ ಸಹಾಯ ಮಾಡು, ಜಾಗೃತನಾಗಿ ಸಹಾಯ ಮಾಡು ಎಂದು ಭರ್ತೃಹರಿ ಹೇಳುತ್ತಾನೆ. ಹಾಗೆ ಇವತ್ತು ರಾಜಶೇಖರರೆಡ್ಡಿಯವರು ಅವರಿಗೆ ಅಧಿಕಾರ ಇದ್ದಂಥ ಸಂದರ್ಭದಲ್ಲಿ ಬಹುಶಃ ಅವರು ಜಾಗೃತರಾಗಿ ಮಾಡಿದ್ದಾರೆ. ಅವರ ಜೀವನದಲ್ಲಿ ಒಂದು ಒಳ್ಳೆಯ ಚಿಂತನೆ ಇತ್ತು. ರಾಜಶೇಖರರೆಡ್ಡಿಯವರು ಒಮ್ಮೆ ಮಾತನಾಡುತ್ತಾ, ನಿಮ್ಮ ಆರೋಗ್ಯ ಸಚಿವರು ಬಂದಿದ್ದರು, ನಾನು ಅವರಿಗೆ ಆರೋಗ್ಯ ಕವಚ ಕಾರ್ಯಕ್ರಮದ ಬಗ್ಗೆ ವಿವರಿಸಿದ್ದೇನೆ, ಅವರು ಅದರ ಬಗ್ಗೆ ಬಹಳ ಆಸಕ್ತಿ ಹೊಂದಿದ್ದಾರೆ ಎಂದು ಹೇಳಿದರು, ಇದನ್ನು

ನಾನು ಅಭಿನಂದಿಸುತ್ತೇನೆ, ನಮ್ಮ ರಾಜ್ಯದಲ್ಲಿ ಶ್ರೀರಾಮುಲು ಅವರು ಈ ಸರ್ಕಾರದಲ್ಲಿ ಆ ಕಾರ್ಯಕ್ರಮವನ್ನು ತಂದಿದ್ದರು, ಅದು ಮಾನವೀಯತೆಯ ದೊಡ್ಡ ಕಾರ್ಯಕ್ರಮ. ಏಕೆಂದರೆ ತಕ್ಷಣ ಎಲ್ಲಾ ತಾಲ್ಲೂಕಿನಲ್ಲಿಯೂ ಆ ಕಾರ್ಯಕ್ರಮ ಪ್ರಾರಂಭವಾಗುತ್ತಿದೆ. ಇಂದಿರಾವಿಲ್ಲು ಎಂಬ ಕಾರ್ಯಕ್ರಮವಿದೆ, ನಾನು ರಮೇಶ್‌ಕುಮಾರ್ ಅವರು ಯಾವುದೋ ಸಂದರ್ಭದಲ್ಲಿ ಕಡಪಗೆ ಹೋಗಿ ಬರುವಾಗ ಆ ಮನೆಗಳ ಕಾರ್ಯಕ್ರಮ ಇವರಲ್ಲಿ ಇದೆ, ಎಂಥ ಒಂದು ಪ್ಲಾನ್ ಹಾಕಿ uniformity ಆಗಿ ಹಣ ಕೊಟ್ಟು ಮನೆಗಳನ್ನು ಕಟ್ಟಿಸಿದ್ದಾರೆಂದರೆ ನಿಜವಾಗಲೂ Rural development ನಲ್ಲಿ ನಾವೆಲ್ಲಾ ಕಲಿಯಬೇಕಾದಂಥ ವಿಚಾರ ಬಹಳಷ್ಟಿದೆ. ಅಲ್ಲಿನ ಮುಖ್ಯಮಂತ್ರಿಗಳು ಆ ರಾಜ್ಯವನ್ನು marketing ಮಾಡುತ್ತಿದ್ದರಲ್ಲ, ವಿಶೇಷವಾಗಿ ಇಲ್ಲಿ ನಮ್ಮ ರಾಜ್ಯದಲ್ಲಿಯೂ ಸರ್ಕಾರ ಮಾಡುವುದನ್ನು ನಾವು ನೋಡಿದ್ದೇವೆ. ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಆ ರಾಜ್ಯದ ಮುಖ್ಯಮಂತ್ರಿಗಳೇ ಆ ರಾಜ್ಯವನ್ನು marketing ಮಾಡುತ್ತಿದ್ದುದನ್ನು ನಾವು ನಮ್ಮ ಕಣ್ಣಿನಲ್ಲಿ ನೋಡಿದ್ದೇವೆ. ನಮ್ಮಲ್ಲಿರುವ Culture, weather, human resources, ನಮ್ಮಲ್ಲಿರುವ takenಗೆ ಹೋಲಿಸಿದರೆ ಆ ರಾಜ್ಯದಲ್ಲಿ ಏನೂ ಇಲ್ಲ, ಆದರೆ ಅವರು ಮಾಡುತ್ತಿದ್ದಂಥ marketing, ಹೊರಗಡೆಯವರನ್ನು ಆಕರ್ಷಣೆ ಮಾಡುವಂಥದ್ದು ಇದೆಯಲ್ಲ, ಜನರನ್ನು ಕರೆದುಕೊಂಡು ಹೋಗುವುದು, ಉದ್ಯೋಗವನ್ನು ಸೃಷ್ಟಿ ಮಾಡುವುದು, ಆ ರಾಜ್ಯವನ್ನು ವಿಕಾಸ ಮಾಡುವುದು ಇದೆಯೆಲ್ಲಾ ಅದನ್ನು ನೋಡಿದರೆ ನಾವು ಕಲಿಯಬೇಕಾದಂಥ ಬಹಳಷ್ಟು ವಿಚಾರಗಳಿವೆ ಎಂದು ನನ್ನ ವೈಯಕ್ತಿಕ ಭಾವನೆಯಾಗಿದೆ. ಸರ್ಕಾರ, ಅಲ್ಲದೆ ಮುಖ್ಯಮಂತ್ರಿಗಳು ಆ ವಿಚಾರದಲ್ಲಿ ಚಿಂತನೆ ಮಾಡುತ್ತಾರೆ ಎಂದು ಈ ಸಂದರ್ಭದಲ್ಲಿ ಒಂದು ಸಣ್ಣ ಸಲಹೆಯನ್ನು ತಮ್ಮ ಮುಖಾಂತರ ಕೊಡಬಯಸುತ್ತೇನೆ. ಉಚಿತವಾದ ವಿದ್ಯುತ್ ಬಗ್ಗೆ ಅವರು ತೆಗೆದುಕೊಂಡಂಥ ಭದ್ರವಾದ ನಿಲುವು ಪ್ರಮಾಣ ವಚನ ಮಾಡಿದ ತಕ್ಷಣ ನುಡಿದಂತೆ ಬಹುಶಃ ನಡೆದಿದ್ದಾರೆ. ಜಲಯಜ್ಞ ಎನ್ನುವಂಥ ಪದವನ್ನು ಕೇಳಿದರೆ, ಇಡೀ ರಾಜ್ಯದಲ್ಲಿ ಎಷ್ಟು ಜನ ಸಾಯುತ್ತಿದ್ದಾರೆ, ನಮಗೆ ಇನ್ನೇನು ಬೇಕು, ನಾವು ಕೆಲವು ಸಂದರ್ಭದಲ್ಲಿ ಕೆಲವರನ್ನು ಭೇಟಿ ಮಾಡಿದೆವು, ಏಕೆ ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಎಂದು ಕೇಳಿದೆವು. ದೇವರಲ್ಲಿ ನಾವು ನಮಗೆ ಮನೆ ಬೇಕು, ನನಗೆ ಆರೋಗ್ಯ ಬೇಕು, ನನ್ನ ಜಮೀನಿಗೆ ಅನುಕೂಲವಾಗಬೇಕು

ಎಂದು ಕೇಳುತ್ತೇವೆ. ಈಗ ದೇವಸ್ಥಾನಕ್ಕೆ ಹೋಗಿ ಪೂಜಾರಿಗಳನ್ನು ನಾವು ಬಹಳ ಮುತುವರ್ಜಿಯಿಂದ ನೋಡುತ್ತೇವೆ, ನಮಗೂ ದೇವರಿಗೆ ಅಷ್ಟೆ ವ್ಯವಹಾರ ಇರುವುದು, ದೇವರನ್ನು ನಾವು ಕೇಳುವುದು. ಏಕೆ ನಾವು ಪೂಜಾರಿಗೆ ಇಷ್ಟು ಗೌರವ ಕೊಡಬೇಕು ಎಂದು ನಾನು ನಮ್ಮ ಸ್ನೇಹಿತರೊಬ್ಬರನ್ನು ಕೇಳಿದೆ, ಅದಕ್ಕೆ ಅವರು ಇಲ್ಲ, "ಅರ್ಚಕಸ್ಯ ಪ್ರಭಾವೇನ ಶಿಲಾದ್‌ಭೂತಿ ಶಂಕರ" ಅಂದರೆ ಅರ್ಚಕರ ಪ್ರಭಾವದಿಂದ ಶಿಲೆಯಲ್ಲಿಯೂ ಶಂಕರನನ್ನು ಕಾಣಬಹುದು ಅಂದರೆ ದೇವರನ್ನು ಕಾಣಬೇಕಾದರೆ ಯಾರಾದರೂ ಒಬ್ಬರು ಮಧ್ಯವರ್ತಿ ಇರಬೇಕು. ಅದಕ್ಕೋಸ್ಕರ ನಾವು ಈ ಸಂದರ್ಭದಲ್ಲಿ ಪೂಜಾರಿಗೆ ಗೌರವವನ್ನು ಕೊಡುತ್ತೇವೆ. ಒಂದು ವಿಚಾರವನ್ನು ದೇವರಿಗೆ ಮುಟ್ಟುಸಬೇಕಾದರೆ, ಭಕ್ತನಿಗೂ ಮತ್ತು ಭಗವಂತನಿಗೂ ವ್ಯವಹಾರ ನಡೆಯಬೇಕಾದರೆ, ಈ ಸರ್ಕಾರ ಸಹ ಒಂದು ರಾಜ್ಯದ ಮುಖ್ಯ ಮಂತ್ರಿಯಾಗಿ, ರಾಜ್ಯ ಒಬ್ಬ ಪೂಜಾರಿಯಾಗಿ ಜನರಿಗೆ ಆ ಎಲ್ಲಾ ವಿಚಾರಗಳನ್ನು ಮುಟ್ಟಿಸಲಿಕ್ಕೆ ಅವರ ಆಸೆ ಆಕಾಂಕ್ಷೆಯನ್ನು ಪೂರೈಸಲಿಕ್ಕೆ ನಿಜವಾಗಿಯೂ ಕೂಡ ಯಶಸ್ವಿಯಾಗಿದ್ದಾರೆ. ಆನರ ಹೃದಯವನ್ನು ಗೆದ್ದಿದ್ದಾರೆ, ನಮ್ಮಂತಹವರಿಗೆ ಮಾರ್ಗದರ್ಶನವಾಗಿದ್ದಾರೆ. ಬೇಕಾದಷ್ಟು ಬಹಳ ಜನ ಹಿರಿಯರು, ಹಿಟ್ಲರ್‌ನನ್ನು ಆತನ ಕ್ರೂರತನಕ್ಕೆ ನೆನೆಸಿಕೊಳ್ಳುತ್ತೇವೆ. ಮಾರ್ಕೋನಿಯನ್ನು ರೇಡಿಯೋ ಕಂಡುಹಿಡಿದರು ಎಂದು ನೆನಸುತ್ತೇವೆ. ಇಡೀ ರಾಷ್ಟ್ರದಲ್ಲಿಯೇ ಗಾಂಧೀಜಿಯವರನ್ನು ಅವರ ಸರಳ ಜೀವನಕ್ಕೆ ಸಹ ನೆನೆಸಿಕೊಳ್ಳುತ್ತೇವೆ ಹಾಗೆಯೇ ಪ್ರತಿಯೊಬ್ಬರಿಗೂ ಕೂಡ ಒಂದೊಂದು ಸಂದರ್ಭದಲ್ಲಿ ಒಂದೊಂದು ಅವಕಾಶ ಇದೆಯಂತೆ, ಡಿ.ವಿ.ಗುಂಡಪ್ಪನವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ, "ಏನಾನುನುಂ ಮಾಡು, ಕೈಗೆ ದೊರೆತುಜ್ಜುಗವ ನಾನೇನು ಹುಲುಕಡ್ಡಿ ಎಂದು ನುಡಿಯಬೇಡ, ಹೀನಮಾವುದುಮಿಲ್ಲ ಜಗದ ಗುಡಿಯೊಳಗೆ, ತಾಣ ಮಿನುಗಹುದಿಲ್ಲಿ ಮಂಕುತಿಮ್ಮ" ಎಂದು ಈ ದೇಗುಲವೆಂದು ಜಗತ್ತಿನಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಎಲ್ಲರಿಗೂ ಕೂಡ ಒಂದಲ್ಲ ಒಂದು ಅವಕಾಶ ಇದ್ದೇ ಇದೆ. ಹಾಗೆ ನಮ್ಮ ಮಿತ್ರರಾದಂಥ ಶ್ರೀ ರಾಜಶೇಖರ ರೆಡ್ಡಿಯವರು ನಮ್ಮನ್ನು ಇವತ್ತು ಅಗಲಿದ್ದಾರೆ. ಅವರು ತೋರಿಸಿದಂಥ ಮಾರ್ಗದರ್ಶನ, ಅವರ ಚಿಂತನೆ, ಈ ದೇಶಕ್ಕೆ, ಅವರ ರಾಜ್ಯಕ್ಕೆ ಕೊಟ್ಟಂಥ ಕೊಡುಗೆ, ನಮ್ಮಂಥವರ ಹೃದಯಕ್ಕೆ ಬಹಳ ಹತ್ತಿರವಾಗಿ ಬಂದು ಇವತ್ತು ಅವರು ಮಾಡಿದಂಥ ಕಾರ್ಯಕ್ರಮ ನಮ್ಮನ್ನು ಪಡೆದುಕೊಂಡ, ಬೆಳೆಸಿದ ರೀತಿ, ನಮಗೆ

ಆಶೀರ್ವಾದದ ರೀತಿಯಲ್ಲಿ ಅವರು ನಿಜವಾಗಿಯೂ ಅವರು ಆದರ್ಶರಾಗಿ ಉಳಿಯಲಿ ಎಂದು ಈ ಸಂದರ್ಭದಲ್ಲಿ ಹೇಳಿ ಆ ಕುಟುಂಬಕ್ಕಷ್ಟೇ ನಷ್ಟವಾಗಿಲ್ಲ, ಆ ರಾಜ್ಯ ಹಾಗೂ ನಮ್ಮಂಥ ಅನೇಕ ಸ್ನೇಹಿತರಿಗೆ ನಷ್ಟವಾಗಿದೆ. ಭಗವಂತ ಅವರ ಆತ್ಮಕ್ಕೆ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸಿ ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ಇನ್ನೂ ಅನೇಕ ವಿಚಾರಗಳನ್ನು ಹಂಚಿಕೊಳ್ಳಬೇಕೆಂದು ಇದ್ದರೂ ಕೂಡ ನಾನು ಆ ಕ್ಷಣಗಳನ್ನು ಮರೆಯಲಿಕ್ಕೆ ಸಾಧ್ಯವಿಲ್ಲ. ಎಷ್ಟೋ ದಿನಗಳ ಕಾಲ ಎಷ್ಟು ವಿಚಾರಗಳಲ್ಲಿ ಜೊತೆಯಲ್ಲಿ ಕಳೆದಿದ್ದೇವೆ, ಕಷ್ಟ ಸುಖಗಳನ್ನು ಹಂಚಿಕೊಂಡಿದ್ದೇವೆ. ಅವರ ಜೀವನದಲ್ಲಿ ನಾವೆಲ್ಲಾ ಪಾಲ್ಗೊಂಡಿದ್ದೇವೆ. ಈ ಸಂದರ್ಭದಲ್ಲಿ ಆ ಭಗವಂತ ಅವರಿಗೆ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಬಿ. ಮಾಲಕರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಈ ಸಂತಾಪ ಸೂಚನೆಗೆ ನಾನು ಅನುಮೋದನೆಯನ್ನು ಸೂಚಿಸುತ್ತಾ ದಿವಂಗತ ಡಾ: ರಾಜಶೇಖರ ರೆಡ್ಡಿಯವರು ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ ಕರ್ನಾಟಕ ರಾಜ್ಯದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಅವರು ಗುಲ್ಬರ್ಗಾದಲ್ಲಿ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ನಾನು ಅಲ್ಲಿ ಪ್ರೊಫೆಸರ್ ಆಗಿದ್ದೆ. ಅವರು ಮೂರವರೆ ವರ್ಷಗಳ ಕಾಲ ನನ್ನ student ಆಗಿದ್ದರು ಮತ್ತು ಅವರ ಮನೆ ನನ್ನ ಮನೆಗೆ ಸಮೀಪ ಕೂಡ ಇತ್ತು. ಅವರು ನನ್ನ ವಿದ್ಯಾರ್ಥಿಯಾಗಿದ್ದಾಗ ನಾನು ಕಂಡಂತೆ ಅವರು ಯಾವಾಗಲು ಒಳಮುಖಿ. Over sensitive, highly self respective ಆಗಿದ್ದರು.

ವಿದ್ಯಾರ್ಥಿಗಳ ಕಾಲೇಜು ಚುನಾವಣೆ ಬಂದಾಗ ಅವರು ಆಂಧ್ರ ವಿದ್ಯಾರ್ಥಿಗಳ ಲೀಡರ್ ಆಗಿದ್ದರು. ಆಗ ಕರ್ನಾಟಕದಿಂದ ಡಾ: ಸಂತೋಷ್ ಕುಮಾರ್‌ರವರು ಇದ್ದರು. ಅವರು ಈಗ ಬೆಂಗಳೂರಿನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅವರು ಮಂಗಳೂರಿನವರು. ಅವರು ಕರ್ನಾಟಕದ ವಿದ್ಯಾರ್ಥಿಗಳಿಗೆ ಲೀಡರ್ ಆಗಿದ್ದರು. ಇವರಿಬ್ಬರಲ್ಲಿ gangwar ಆಯಿತು. ದೊಡ್ಡ ಜಗಳವಾಯಿತು. ರಕ್ತಸಿಕ್ತವಾದಂಥ ವಾತಾವರಣ ನಿರ್ಮಾಣವಾಗುತ್ತಿತ್ತು. ಆಗ ಪ್ರಿನ್ಸಿಪಾಲರು ಡಾ: ಶಂಕರ್‌ರವರನ್ನು, ನನ್ನನ್ನು ಹಾಗೂ ಡಾ: ವಸಳಿ ರವರನ್ನು ಕಳುಹಿಸಿದ್ದರು. ನಮ್ಮ ಮೂವರ ಮಾತನ್ನು ಅವರು ಕೇಳುತ್ತಿದ್ದರು. ಅವರನ್ನು ಸಮಜಾಯಿಷಿ ಮಾಡುವುದಕ್ಕೆ ಮೂರೂ ಜನರನ್ನು

ಕಳುಹಿಸಿದ್ದರು. ಆವತ್ತು ಇಂತಹ ಒಂದು ವಾತಾವರಣವಿತ್ತು. ಇಷ್ಟಾದರೂ ಕೂಡ ತಮ್ಮ ಅಭ್ಯಾಸದ ಕಡೆಗೆ ಬಹಳ ಕಾಳಜಿಯಿಂದ ಇರುತ್ತಿದ್ದರು. ಅವರು regular ಆಗಿ ಪಾಸ್ ಆಗುತ್ತಾ ಹೋಗುತ್ತಿದ್ದರು. ಇನ್ನೊಂದು ಗುಣ ಕಂಡದ್ದು ಏನೆಂದರೆ, ಆಗಿನ ಕಾಲದಲ್ಲಿ ಮೆಡಿಕಲ್ ಕಾಲೇಜುಗಳಲ್ಲಿ ರ್ಯಾಗಿಂಗ್ ಬಹಳ common ಆಗಿ ಇತ್ತು. ಯಾವ ಹುಡುಗರು ರ್ಯಾಗಿಂಗ್‌ಗೆ ತುತ್ತಾಗಿರುತ್ತಿದ್ದರು, ಅವರ ಪರವಾಗಿ ವೈ.ಎಸ್.ಆರ್.ರವರು ಅವರಿಗೆ ಧೈರ್ಯ ಕೊಟ್ಟು ಇದಕ್ಕೆ ಯಾರು ಕಾರಣರು ಆಗಿರುತ್ತಿದ್ದರು ಅವರಿಗೆ ತಕ್ಕ ಶಿಕ್ಷೆ ಕೊಡುತ್ತಿದ್ದರು. ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೇ ಇಂತಹ ಒಂದು ಗುಣವನ್ನು ಅಳವಡಿಸಿಕೊಂಡಿದ್ದರು. ಈಗಾಗಲೇ ಅನೇಕ ಸದಸ್ಯರು ಹೇಳಿದಂತೆ ಅವರು ಮಾಡಿದ ಕೆಲಸ ನೋಡಿದರೆ ಅದರಲ್ಲೂ ಜನ ಪರ, ಬಡವರ ಪರ ಕಾರ್ಯಕ್ರಮಗಳನ್ನು ಹಾಕಿಕೊಂಡು ಪರಿಣಾಮಕಾರಿಯಾಗಿ ಅವರು ಅನುಷ್ಠಾನವನ್ನು ಮಾಡಿದ್ದನ್ನು ನೋಡಿದರೆ ಇಂತಹ ದುರ್ಮರಣ ಅವರಿಗೆ ಬರಬಾರದಾಗಿತ್ತು. ಆದರೆ, ಇದು ಭಗವಂತ ಜಗತ್ತಿಗೆ ಇಟ್ಟ ವಿಧಿ. ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ ನಾನು ಅವರನ್ನು ಭೇಟಿ ಮಾಡಿದ್ದೆ. ಅವರು ಎಷ್ಟೇ ಎತ್ತರವಾದ ಸ್ಥಾನಕ್ಕೆ ಹೋದರೂ ಸಹ ಅವರು ಮಾನವ ಸಹಜವಾದ ಸೌಜನ್ಯತೆಯನ್ನು ಎಂದಿಗೂ ಕಳೆದುಕೊಂಡಿಲ್ಲ. ಅತ್ಯಂತ ವಿನಮ್ರ ಭಾವನೆಯಿಂದ ಸರ್ ತಮಗೆ ನನ್ನ ಬಗ್ಗೆ ಏನು ಅನಿಸುತ್ತದೆ. ನನ್ನ ಬಗ್ಗೆ ತಾವು ಏನು ಕೇಳಿದ್ದೀರಿ. ತಮ್ಮದು ನೆರೆ ರಾಜ್ಯ ಎಂದು ನಾನು ಒಂದು ಮಾತನ್ನು ಕೇಳಿದೆ. ಒಬ್ಬ ರಸ್ತೆಯಲ್ಲಿ ನಡೆಯುವಂಥ ಸಾಮಾನ್ಯ ಮನುಷ್ಯನಿಂದ ಹಿಡಿದು ಒಬ್ಬ Business Executive, ಒಬ್ಬ Government Secretary ವರೆಗೆ ಎಲ್ಲರನ್ನೂ ಕೇಳಿದಾಗ ಎಲ್ಲರ ಬಾಯಿಯಲ್ಲಿಯೂ ಕೂಡ ಅವರ ಬಗ್ಗೆ ಒಂದೇ ಒಂದು ಅಭಿಪ್ರಾಯ ಬರುತ್ತಿತ್ತು. ನಾನು ಯಾವಾಗಲೂ ಹೈದರಾಬಾದ್‌ಗೆ ಹೋದರೆ ಗ್ರೀನ್ ಪಾರ್ಕ್ ಹೋಟೆಲ್‌ನಲ್ಲಿ ತಂಗುತ್ತೇನೆ. ಅವರಿಗೆ ಆ ಮಾತನ್ನು ನಾನು ಹೇಳಿದೆ. ಅಲ್ಲಿಯ ಎಂ.ಡಿ. ಮಾನ್ಯ ಮುರುಳಿಕೃಷ್ಣ ರೆಡ್ಡಿಯವರು, ಅವರು UKPಯಲ್ಲಿ Class I Contractor ಆಗಿದ್ದಾರೆ. ಅವರು ನನಗೆ ಪರಿಚಯಸ್ಥರು. ನಾನು ಮಾನ್ಯ ರಾಜಶೇಖರ ರೆಡ್ಡಿಯವರಿಗೆ ಹೇಳಿದೆ. he was your bitterest critic earlier, but today he tells Mr. Rajashekar Reddy must rule for another 5

years in Andra Pradesh and later on he should move to Delhi ಎಂದು ಅವರು ಹೇಳಿದರು. ನೀವು ಟೀಕೆ ಮಾಡುತ್ತಿದ್ದವರು ಇಷ್ಟೊಂದು appreciate ಮಾಡುತ್ತೀರಿ ಅದಕ್ಕೆ ಕಾರಣವೇನು ಎಂದು ನಾನು ಕೇಳಿದೆ. ನಂಬರ್ ಒನ್ ಅವರು ಹೇಳಿದ್ದು ಏನೆಂದರೆ ನಮ್ಮ ಸರ್ಕಾರ ಹಾಗೂ ನಾವೆಲ್ಲರೂ ಅದರ ಬಗ್ಗೆ ಗಮನವಿಡಬೇಕಾಗುತ್ತದೆ. ಬಡವರಿಗೆ unlimited number of houses ಕೊಟ್ಟಿದ್ದಾರೆ. ನಮ್ಮಲ್ಲಿ ಒಂದೊಂದು ಹಳ್ಳಿಗೆ 5-10 ಮನೆಗಳನ್ನು ಕೊಡಬೇಕಾದರೆ ನಾವು ಗೋಳಾಡುತ್ತೇವೆ. ಜಗಳವಾಗುತ್ತದೆ. ಅಲ್ಲಿ unlimited number of houses ಕೊಟ್ಟಿದ್ದಾರೆ. ಇದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ. ವಿದ್ಯುತ್ ವಿಚಾರಕ್ಕೆ ಸಂಬಂಧಪಟ್ಟಂತೆ ಐದು ಹಾರ್ಸ್ ಪವರ್‌ನ free current ಕೊಟ್ಟಿದ್ದಾರೆ. free power ನಿಂದ ಆ ರಾಜ್ಯಕ್ಕೆ ಇದರಿಂದ ಖರ್ಚಾದದ್ದನ್ನು ನೋಡಿದರೆ ಆರು ಸಾವಿರ ಕೋಟಿ ರೂಪಾಯಿ ಗಳಷ್ಟು ವರ್ಷಕ್ಕೆ ಬರತಕ್ಕಂಥ ಆದಾಯವನ್ನು ರೈತರ ಹಿತಕ್ಕಾಗಿ ಮಾಫಿ ಮಾಡಿದ್ದಾರೆ. ಇದರಿಂದ 60 ಪ್ರತಿಶತ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ರೈತರಿಗೆ ಪ್ರಯೋಜನವಾಗಿದೆ. 60% of the population are beneficiaries by this ಹಾಗೂ Lift irrigation scheme ಮಾಡಿದ್ದಾರೆ, ಆ ಸ್ಕೀಂ ಅನ್ನು ಕೂಡ ರಿಯಾಯಿತಿ ದರದಲ್ಲಿ ಕೊಟ್ಟಿದ್ದಾರೆ. ಏಕೆಂದರೆ lift irrigationಗೆ 5 horse power ಇದೆ, ಅದಕ್ಕೆ ಹೆಚ್ಚು horse power ಬೇಕಾಗುತ್ತದೆ. ಅದಕ್ಕೆ ಅವರಿಗೂ ಕೂಡ ರಿಯಾಯಿತಿಯನ್ನು ಕೊಟ್ಟಿದ್ದಾರೆ. ಹೀಗೆ ಒಟ್ಟು 6,500 ಕೋಟಿ ಮೌಲ್ಯದ ವಿದ್ಯುತ್ ಅನ್ನು ರೈತರಿಗೆ free ಆಗಿ ಕೊಟ್ಟಿದ್ದಾರೆ. ಜಲ ಯಜ್ಞಕ್ಕೆ ಸಂಬಂಧಪಟ್ಟಂತೆ 110 ಕಾರ್ಯಕ್ರಮಗಳನ್ನು ಅವರ apcm ಎನ್ನುವ ವೆಬ್‌ಸೈಟ್‌ನಲ್ಲಿ down load ಮಾಡಿ ನೋಡಿದರೆ ಇವೆಲ್ಲಾ ಕಾಣಿಸುತ್ತದೆ. ಅದು authenticate ಆಗಿರುತ್ತದೆ. ಏಕೆಂದರೆ, ಒಂದು news paperನಲ್ಲಿ ಒಂದು ರೀತಿ ಹೇಳುತ್ತಾರೆ. ಮತ್ತೊಂದು news paper ನಲ್ಲಿ ಇನ್ನೊಂದು ಬರೆಯುತ್ತಾರೆ. ಈ ಸದನದಲ್ಲಿ ಎಲ್ಲರೂ ಕೇಳಬೇಕಾದುದು ಏನೆಂದರೆ 110 irrigation schemeಗಳನ್ನು ಕೇಂದ್ರ ಸರ್ಕಾರದಿಂದ clearance ಪಡೆದು ರಾಜ್ಯದ ಬೊಕ್ಕಸದಿಂದ 43 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ irrigation schemeಗೆ ಸಂಬಂಧಪಟ್ಟಂತೆ 90% of the projects have been completed. ಈ

ಯೋಜನೆಗಳಲ್ಲಿ 19 ಲಕ್ಷ ಎಕರೆ ಭೂಮಿಗೆ ಈಗಾಗಲೇ ನೀರಾವರಿಯನ್ನು ಕೊಟ್ಟಿದ್ದಾರೆ. ಇದು ಐದು ವರ್ಷಗಳಲ್ಲಿ commissioned ಆಗಿದೆ. ಮುಂದೆ ಅವರ ಆಲೋಚನೆ ಏನೆಂದರೆ ಆಂಧ್ರದಲ್ಲಿ 81 ಲಕ್ಷ ಎಕರೆ ಭೂಮಿಗೆ ನೀರಾವರಿಯನ್ನು ವ್ಯವಸ್ಥೆ ಮಾಡತಕ್ಕಂಥ ಒಂದು ಸ್ಕೀಂಅನ್ನು ಮಾಡಿಕೊಂಡಿದ್ದರು. ಅದಕ್ಕಾಗಿ ಅವರು 1 ಲಕ್ಷ 60 ಸಾವಿರ ಕೋಟಿ ಬಜೆಟ್ ಅನ್ನು ಅಂದಾಜು ಮಾಡಿ ವರ್ಷಕ್ಕೆ ಎಷ್ಟೆಷ್ಟು ಕೊಡಬೇಕೆಂಬ ವ್ಯವಸ್ಥೆಯನ್ನು ಮಾಡಿದ್ದರು. ಅವರು ವಿಧಿವಶರಾಗದಿದ್ದರೆ ಮುಂದಿನ 5 ವರ್ಷಗಳಲ್ಲಿ ಅವರು ಉದ್ದೇಶಿಸಿದ 81 ಲಕ್ಷ ಎಕರೆ ಭೂಮಿಗೆ ನೀರಾವತಿ ಸೌಲಭ್ಯವನ್ನು ಕಲ್ಪಿಸುತ್ತಿದ್ದರು. ಎಲ್ಲದಕ್ಕಿಂತ ಮಹತ್ವವಾದದ್ದು ಏನೆಂದರೆ ಆರೋಗ್ಯ ಸ್ಕೀಂ. ನಮ್ಮ ಆರೋಗ್ಯ ಸಚಿವರು ಕೇವಲ ಒಂದೇ ಒಂದು ಸ್ಕೀಂ ಅನ್ನು ತೆಗೆದುಕೊಂಡಿದ್ದಾರೆ. ಆದರೆ, ಒಟ್ಟು 4 ಆರೋಗ್ಯ ಸ್ಕೀಂ ಅನ್ನು ಅವರು ಮಾಡಿದ್ದಾರೆ. No.1, they have identified 942 diseases for which free treatment is a vailable for BPL patients. 942 diseases both medical and surgical. Under the scheme 2 lakhs surgeries have been completed. ಅದರಲ್ಲಿ heart surgeries, brain surgeries, kidney surgeries and AP Government has identified Corporate hospitals. ಯಾವ ಕಾರ್ಪೊರೇಟ್ ಆಸ್ಪತ್ರೆಯಲ್ಲಿ ಯಾವ ಆಪರೇಷನ್ ಆಗಬೇಕು, ಯಾವ ರೋಗಗಳಿಗೆ ಚಿಕಿತ್ಸೆ ನೀಡಬೇಕು ಅಂತವರಿಗೆ ಅವರು ಕೋಟಾ ಕೊಟ್ಟಿದ್ದಾರೆ. ಇಷ್ಟೊಂದು ವ್ಯವಸ್ಥೆಯನ್ನು ಮಾಡಿ 900 ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ನಲ್ಲಿ ಇಟ್ಟಿದ್ದಾರೆ. ಇಷ್ಟು ಕೆಲಸ ಮಾಡುವುದಕ್ಕೆ ನಮಗೆ ಏಕೆ ಆಗುವುದಿಲ್ಲ? ಎಲ್ಲರಿಗೂ ಗೊತ್ತಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಇವತ್ತು diabetes ಹಾಗೂ heart diseases ಹಬ್ಬಿದೆ. ಅಲ್ಲಿಯೂ ಸಹ ಜನ ಹೃದಯ ರೋಗದಿಂದ ಬಳಲುತ್ತಿದ್ದಾರೆ. ಅದಕ್ಕೆ ಇದನ್ನು ಆಲೋಚನೆ ಮಾಡಿ 900 ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಸರ್ಕಾರಿ ಹಾಸ್ಪಿಟಲ್‌ಗಳಲ್ಲಿ ಯಾವ operations ಮಾಡುವುದಕ್ಕೆ ಆಗುವುದಿಲ್ಲ ಅದಕ್ಕೆ ಯಾವುದೇ ಪ್ರೈವೇಟ್ ಹಾಸ್ಪಿಟಲ್‌ಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿರುತ್ತದೆ. Government ನಲ್ಲಿ reimbursement ಮಾಡುತ್ತಾರೆ. ಇದನ್ನು ಮಾಡುವುದಕ್ಕೆ 900 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿ

ಯಾಗಿದ್ದಾಗ ಅವರು ತಮ್ಮ ಬಜೆಟ್‌ನಲ್ಲಿ Governor address ನಲ್ಲಿ ಒಂದು ಮಾತನ್ನು ಹೇಳಿದ್ದರು. ತತ್‌ಕ್ಷಣ ಅವರು ಪ್ರಧಾನ ಮಂತ್ರಿಗಳಾಗಿ ಅಲ್ಲಿ ಹೋದರು. ಅವರು ಏನು ಹೇಳಿದ್ದರು ಎಂದರೆ, ಬಡವರ ಚಿಕಿತ್ಸೆಗಾಗಿ 500 ಕೋಟಿ ರೂಪಾಯಿಗಳನ್ನು ನಾನು ಒಂದು ಕ್ಯಾಪಿಟಲ್ ಮಾಡಿ ಬ್ಯಾಂಕ್‌ನಲ್ಲಿ ಇಡುತ್ತೇನೆ. ಆ ಬಡ್ಡಿಯಲ್ಲಿ ಬಡವರಿಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಚಿಕಿತ್ಸೆಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದರು. ಅದನ್ನು ಅವರು ಮರೆತೇ ಬಿಟ್ಟರು. ಆದರೆ, ಮಾನ್ಯ ರಾಜಶೇಖರ ರೆಡ್ಡಿಯವರು 900 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಬಜೆಟ್‌ನಲ್ಲಿ ಇಡುತ್ತಾ ಇದ್ದರು. ಎರಡನೇಯದಾಗಿ, ತುರ್ತು ಆರೋಗ್ಯ ಸೇವೆ 108 ಇದನ್ನು ಕರ್ನಾಟಕದಲ್ಲಿ ಪ್ರಾರಂಭಿಸಲಾಗಿದೆ. ಅದನ್ನೇ ambulance service ಎನ್ನುವುದು. ಆದರೆ, ಅಲ್ಲಿ ಅವರು 104ರಲ್ಲಿ ಎರಡು ಸ್ಕೀಂ ಮಾಡಿದ್ದಾರೆ. ಮೊದಲನೇಯದು mobile health unit ಎಂದು ಮಾಡಿದ್ದಾರೆ. ಅದರಲ್ಲಿ 475 mobile ambulanceಗಳನ್ನು ಸಜ್ಜು ಮಾಡಿ ಅವುಗಳಲ್ಲಿ ಎಲ್ಲಾ ತಪಾಸಣೆ ಮಾಡುವಂಥ lab facility ಮತ್ತು free medical treatment ಸೌಲಭ್ಯವಿರುತ್ತದೆ.

1-00 PM

ಯಾವ ಹಳ್ಳಿಗಳಲ್ಲಿ Primary health centres ಇರುವುದಿಲ್ಲವೋ ಅಂತಹ ಹಳ್ಳಿಗಳಲ್ಲಿ mobile health unit ambulance ತಿರುಗಾಡಿ ಜನರಿಗೆ ತಪಾಸಣೆ ಮಾಡುವುದು ಹಾಗೂ ಚಿಕಿತ್ಸೆ ಕೊಡತಕ್ಕಂಥ ವ್ಯವಸ್ಥೆ ಮಾಡಿದರು. ಇನ್ನೊಂದು, "104 help line" ಕಾರ್ಯಕ್ರಮ. ಇದು ಬಹಳ interesting ಆದ ಕಾರ್ಯಕ್ರಮ. ಇದರಲ್ಲಿ tele-medicine ವ್ಯವಸ್ಥೆ ಎನ್ನುವುದು ಇದೆ. ಹೈದರಾಬಾದ್‌ನ ಕೇಂದ್ರದಲ್ಲಿ ತಜ್ಞ ವೈದ್ಯರ ಗುಂಪು ಇದೆ. ದಿನವೂ 60 ಸಾವಿರ callಗಳನ್ನು receive ಮಾಡಿ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಹೀಗೆ ಒಂದಲ್ಲ ಎರಡಲ್ಲ ಅನೇಕ ಯೋಜನೆಗಳನ್ನು ಅವರು ತಯಾರು ಮಾಡಿದ್ದಾರೆ. ಐದು ವರ್ಷಗಳಿಂದ ಜನರಿಗೆ extra tax ಹಾಕಿಲ್ಲ ಮತ್ತು surplus budget ಕೊಟ್ಟಿದ್ದಾರೆ. ಇಷ್ಟೊಂದು ಸ್ಕೀಂಗಳಿಗೆ ಹಣವನ್ನು ಕೊಟ್ಟಿದ್ದಾರೆ. ಐದು ವರ್ಷಗಳಲ್ಲಿ ನೀರಾವರಿಗೆ averageನಲ್ಲಿ 49 ಪರ್ಸೆಂಟ್ ಕೊಟ್ಟಿದ್ದಾರೆ. ಇಷ್ಟೊಂದು ಉತ್ತಮವಾದ ಆಡಳಿತದ ನಿರ್ವಹಣೆಯನ್ನು

ಮಾಡಿ resurce mobilize ಮಾಡಿ, ಅಂದುಕೊಂಡಿರುವ ಹಾಗೆ ನಡೆಯುವಂಥ ಒಬ್ಬ ಪ್ರಾಮಾಣಿಕ ರಾಜಕಾರಣಿ ಯಾರಾದರೂ ಆಗಿದ್ದರೆ, ಅದು ರಾಜಶೇಖರ ರೆಡ್ಡಿ ಅವರು. ಇಷ್ಟೊಂದು ಸಹಾನುಭೂತಿ ಕೇವಲ ಆಂಧ್ರಪ್ರದೇಶದಲ್ಲಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲೇ ಮಹಾಪೂರವಾಗಿ ಹರಿದು ಬಂದಿತು. ಜನರ ಇಂತಹ ಒಂದು ಸ್ಪಂದನೆಗೆ ಗೌರವವನ್ನು ಕೊಟ್ಟು, ರಾಷ್ಟ್ರದ ಎಲ್ಲಾ ಪಕ್ಷಗಳ ಧುರೀಣರು ಬಂದು, ಅವರು ತಮ್ಮ ಸಂತಾಪವನ್ನು ಸೂಚಿಸಿ ಅಗಲಿದ ಈ ಧೀಮಂತ ನಾಯಕನಿಗೆ ಗೌರವವನ್ನು ಸಲ್ಲಿಸಿದ್ದಾರೆ. ಅವರ ಜೀವನ, ಅವರ ಕಾರ್ಯಕ್ರಮ ನಮ್ಮಲ್ಲಿ ಮಾರ್ಗದರ್ಶನವಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ದಿವಂಗರತಾದ ವೈ.ಎಸ್.ರಾಜಶೇಖರ ರೆಡ್ಡಿ ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

3. ಪ್ರಕಟಣೆ :

ಅಧ್ಯಕ್ಷರು : ಈ ದಿನ ಅಂದರೆ, ದಿನಾಂಕ: 9.9.2009 ರಂದು ಬೆಳಗ್ಗೆ ನಡೆದ ಕಾರ್ಯ ಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತುತ ಅಧಿವೇಶನವನ್ನು ದಿನಾಂಕ: 14, 15 ಮತ್ತು 16ನೇ ಸೆಪ್ಟೆಂಬರ್ 2009ರ ದಿನಗಳಂದು ನಡೆಸಲು ತೀರ್ಮಾನಿಸಲಾಗಿದೆ. ಇದಕ್ಕೆ ಸದನದ ಸಹಮತಿ ಇದೆಯೆಂದು ನಾನು ಭಾವಿಸುತ್ತೇನೆ.